# ಕರ್ನಾಟಕ ವಿಧಾನಸಭೆ

## ಹದಿನೈದನೇ ವಿಧಾನಸಭೆ

## (ನಾಲ್ಕನೇ ಅಧಿವೇಶನ)

## ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ

# 19ನೇ ಜುಲೈ 2019

----

**[ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು - ತೋಟಗಾರಿಕೆ ಸಚಿವರು - ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು - ಕೃಷಿ ಸಚಿವರು - ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು - ಸಹಕಾರ ಸಚಿವರುಹಾಗೂ ಸಮಾಜ ಕಲ್ಯಾಣ ಸಚಿವರು ].**

**ಒಟ್ಟು ಪ್ರಶ್ನೆಗಳು - 149**

----

**15/4/1124**

**ವಸತಿ ಶಾಲೆಗಳು**

751 **ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

**ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಇಲಾಖೆಯಿಂದ ನಿರ್ಮಾಣಗೊಳ್ಳುತ್ತಿರುವ ವಸತಿ ನಿಲಯ, ವಸತಿ ಶಾಲಾ ಕಟ್ಟಡಗಳೆಷ್ಟು; (ಮಾಹಿತಿ ನೀಡುವುದು); (ಮತಕ್ಷೇತ್ರವಾರು, ಗ್ರಾಮವಾರು ಸಂಪೂರ್ಣ ವಿವರ ನೀಡುವುದು)
ಆ) ಇಲಾಖೆಯಿಂದ ದೊರೆಯುತ್ತಿರುವ ವಿವಿಧ ಸೌಲಭ್ಯಗಳು ಹಾಗೂ ಅವುಗಳಿಗೆ ಇರಬೇಕಾದ ಅರ್ಹತೆಗಳೇನು; (ವಿವರ ಒದಗಿಸುವುದು)
ಇ) ರಾಜ್ಯದಲ್ಲಿ ಪ್ರಸ್ತುತ ಇರುವ ಮೊರಾರ್ಜಿ ದೇಸಾಯಿ, ರಾಣಿಚೆನ್ನಮ್ಮ, ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಿದ್ದು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ವಸತಿ ಶಾಲೆಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಇದ್ದಲ್ಲಿ ಯಾವಾಗ ಮಾಡಲಾಗುವುದು;
ಈ) ಬೆಳಗಾವಿ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಮೊರಾರ್ಜಿ ದೇಸಾಯಿ, ರಾಣಿಚೆನ್ನಮ್ಮ, ಏಕಲವ್ಯ ಮಾದರಿ ವಸತಿ ಶಾಲೆಗಳನ್ನು ಸ್ಥಾಪಿಸಲು ಮನವಿ ಸ್ವೀಕೃತವಾಗಿದೆಯೇ; (ವಿವರ ಒದಗಿಸುವುದು)

----

**15/4/1125**

## ಅಭಿವೃದ್ಧಿ ನಿಗಮಗಳು

752 **ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಅಭಿವೃದ್ಧಿ ನಿಗಮಗಳಾವುವು; ಅವುಗಳಿಂದ ದೊರೆಯುವ ವಿವಿಧ ಸೌಲಭ್ಯಗಳಾವುವು, ಅವುಗಳಿಗೆ ಇರುವ ರೂಪುರೇಷೆಗಳೇನು; (ವಿವಿಧ ನಿಗಮಗಳವಾರು ಮಾಹಿತಿ ನೀಡುವುದು)
ಆ) ದಿನಾಂಕ: 01012018 ರಿಂದ 30062019 ರ ವರೆಗೆ ರಾಜ್ಯದ ವಿವಿಧ ಮತಕ್ಷೇತ್ರಗಳಿಗೆ ಯಾವ ಯಾವ ಭವನಗಳನ್ನು ನಿರ್ಮಿಸಲು ಅನುದಾನವನ್ನು ಬಿಡುಗಡೆಗೊಳಿಸಿದೆ; ಅದಕ್ಕಿರುವ ಮಾನದಂಡಗಳೇನು;
ಇ) ಬೆಳಗಾವಿ ದಕ್ಷಿಣ ಮತಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಡಾ. ಅಂಬೇಡ್ಕರ ಭವನ, ಡಾ. ಜಗಜೀವನರಾಮ್ ಭವನ, ಮಹರ್ಷಿ ವಾಲ್ಮೀಕಿ ಭವನಗಳ ನಿರ್ಮಾಣಕ್ಕೆ, ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಗಳ ಬಾಂಧವರುಗಳು ವಾಸಿಸುವ ಪ್ರದೇಶಗಳ ಅಭಿವೃದ್ಧಿಗೆ ಶಾಸಕರು ಯಾರಾದರು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆಯೇ; ಸಲ್ಲಿಸಿದ್ದಲ್ಲಿ, ಅವರ ಹೆಸರು ಮತ್ತು ಸಲ್ಲಿಸಿದ ಪ್ರಸ್ತಾವನೆಗಳಲ್ಲಿರುವ ವಿವರಗಳೇನು;
ಈ) ಬೆಳಗಾವಿ ದಕ್ಷಿಣ ಮತಕ್ಷೇತ್ರ ವ್ಯಾಪ್ತಿಯಲ್ಲಿ ಭವನಗಳ ನಿರ್ಮಾಣಕ್ಕೆ ಹಾಗೂ ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡದವರು ವಾಸಿಸುವಪ್ರದೇಶಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕ್ಷೇತ್ರಕ್ಕೆ ಅನುದಾನ ಬಿಡುಗಡೆಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ;
ಉ) ಸದರಿ ಕ್ಷೇತ್ರಕ್ಕೆ ಅನುದಾನ ಬಿಡುಗಡೆಗೊಳಿಸದಿರಲು ಕಾರಣಗಳೇನು? (ವಿವರಗಳೊಂದಿಗೆ ಮಾಹಿತಿ ನೀಡುವುದು)

----

15/4/1126

## ಪಶುಸಂಗೋಪನಾ ಇಲಾಖೆಯ ಸೌಲಭ್ಯಗಳು

753 **ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಜಿಲ್ಲೆಯಲ್ಲಿ ಪಶುಸಂಗೋಪನಾ ಇಲಾಖೆಯಿಂದ ದಿನಾಂಕ: 01012018 ರಿಂದ 30062019 ರ ಅವಧಿಯಲ್ಲಿ ನೀಡಿರುವ ವಿವಿಧ ಸೌಲಭ್ಯಗಳಾವುವು; (ಮತಕ್ಷೇತ್ರವಾರು, ಯೋಜನೆವಾರು, ಸೌಲಭ್ಯ ಪಡೆದಿರುವ ಫಲಾನುಭವಿಗಳ ಹೆಸರು, ವಿಳಾಸ ಮುಂತಾದ ವಿವರ ನೀಡುವುದು)
ಆ) ಬೆಳಗಾವಿ ತಾಲ್ಲೂಕಿನಲ್ಲಿ ಮೀನುಗಾರಿಕೆ ಇಲಾಖೆಯಿಂದ ದೊರೆಯುತ್ತಿರುವ ವಿವಿಧ ಸೌಲಭ್ಯಗಳಾವುವು; ಸೌಲಭ್ಯಗಳ ವಿವರಗಳನ್ನು ಸ್ಥಳೀಯ ಶಾಸಕರ ಗಮನಕ್ಕೆ ತರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹವರ ಮೇಲೆ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)
ಇ) 01012018 ರಿಂದ 30062019ರ ಅವಧಿಯಲ್ಲಿ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿನ ಫಲಾನುಭವಿಗಳಿಗೆ ಇಲಾಖೆಯು ನೀಡಿರುವ ಸೌಲಭ್ಯಗಳಾವುವು; (ಯೋಜನೆವಾರು ವಿವರವನ್ನು ಕ್ಷೇತ್ರವಾರು ಒದಗಿಸುವುದು)
ಈ) ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ಅವಶ್ಯವಿರುವವರಿಗೆ ಯೋಜನೆಯ ಸೌಲಭ್ಯಗಳನ್ನು ನೀಡದೇ, ಇಲ್ಲಿನ ಅಧಿಕಾರಿಗಳು ಬೇಕಾದವರಿಗೆ ಮಾತ್ರ ಯೋಜನೆಯ ಸೌಲಭ್ಯವನ್ನು ನೀಡುತ್ತಿರುವುದುಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವರ ಮೇಲೆ ಕೈಗೊಂಡಿರುವ ಕ್ರಮವೇನು?

----

15/4/53

**ಪ್ರವಾಸೋದ್ಯಮ ಅಭಿವೃದ್ಧಿ**

**754** **ಐಹೊಳೆ ದುರ್ಯೋಧನ ಮಹಾಲಿಂಗಪ್ಪ (ರಾಯಭಾಗ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳಾವುವು; (ವಿವರ ನೀಡುವುದು)

ಆ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೀಸಲಿಟ್ಟು, ಒದಗಿಸಿರುವ ಅನುದಾನವೆಷ್ಟು;

ಇ) ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಅನುಮತಿ ಪಡೆದು ನಡೆಸಲಾಗುತ್ತಿರುವ ವಸತಿ ಗೃಹಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

----

15/4/54

**ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಸಾಲ ಸೌಲಭ್ಯ**

**755** **ಐಹೊಳೆ ದುರ್ಯೋಧನ ಮಹಾಲಿಂಗಪ್ಪ (ರಾಯಭಾಗ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಮಂಜೂರಾದ ಧನಸಹಾಯದ ಸಾಲವನ್ನು ಬ್ಯಾಂಕುಗಳು ಫಲಾನುಭವಿಗಳಿಗೆ ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಬಡ ಪರಿಶಿಷ್ಟ ಜನಾಂಗದವರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕಾನೂನಾತ್ಮಕ ಕ್ರಮಗಳೇನು? (ವಿವರ ನೀಡುವುದು)

----

15/4/55

**ಡಾ: ಬಿ.ಆರ್. ಅಂಬೇಡ್ಕರ್ ನಿಗಮದ ಯೋಜನೆಗಳು**

**756** **ಐಹೊಳೆ ದುರ್ಯೋಧನ ಮಹಾಲಿಂಗಪ್ಪ (ರಾಯಭಾಗ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಜಿಲ್ಲೆ, ರಾಯಭಾಗ ಮತಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ಸಮುದಾಯದವರು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕ್ಷೇತ್ರದ ವ್ಯಾಪ್ತಿಗೆ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಸಾಲ ಸಹಾಯಧನ ಮತ್ತು ಗಂಗಾ ಕಲ್ಯಾಣ ಯೋಜನೆಯ ಗುರಿಗಳನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು; (ವಿವರ ನೀಡುವುದು)
ಈ) ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)

----

15/4/56

**ಪಶು ಚಿಕಿತ್ಸಾ ಕೇಂದ್ರಗಳು**

**757 ಐಹೊಳೆ ದುರ್ಯೋಧನ ಮಹಾಲಿಂಗಪ್ಪ (ರಾಯಭಾಗ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಜಿಲ್ಲೆ, ರಾಯಭಾಗ ಮತಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಶು ಚಿಕಿತ್ಸಾ ಕೇಂದ್ರಗಳ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ, ಈ ಶಿಥಿಲಾವಸ್ಥೆಯಲ್ಲಿರುವ ಪಶುಚಿಕಿತ್ಸಾ ಕೇಂದ್ರಗಳ ಕಟ್ಟಡಗಳ ದುರಸ್ಥಿ ಹಾಗೂ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;
ಇ) ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುವುದು ಹಾಗೂ ದುರಸ್ಥಿಗೊಳಿಸಲಾಗುವುದು;
ಈ) ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)

----

15/4/705

**ವಸತಿ ನಿಲಯಗಳನ್ನು ಮಂಜೂರು ಮಾಡುವುದು**

**758 ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕುಷ್ಟಗಿ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಸತಿ ನಿಲಯಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ;
ಆ) ಯಾವ ಸ್ಥಳಗಳಲ್ಲಿ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಸತಿ ನಿಲಯಗಳನ್ನು ಪ್ರಾರಂಭಿಸಲಾಗುವುದು ಹಾಗೂ ವಸತಿ ನಿಲಯಗಳಲ್ಲಿನ ಸಂಖ್ಯಾಬಲವೆಷ್ಟು;
ಇ) ಪ್ರಸ್ತುತ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;
ಈ) ರಾಜ್ಯದಲ್ಲಿ ಹೊಸದಾಗಿ ಮೆಟ್ರಿಕ್ ಪೂರ್ವ ಅಥವಾ ಮೆಟ್ರಿಕ್ ನಂತರದ ವಸತಿ ನಿಲಯಗಳನ್ನು ಮಂಜೂರು ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

----

15/4/715

**ಸಾಲಮನ್ನಾ ಯೋಜನೆಯಗೆ ಅನುದಾನ**

**759 ಅಮೃತ್ ಅಯ್ಯಪ್ಪ ದೇಸಾಯಿ (ಧಾರವಾಡ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಧಾರವಾಡ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಸಾಲಮನ್ನಾ ಯೋಜನೆಯಡಿ ಎಷ್ಟು ಫಲಾನುಭವಿಗಳಿಗೆ ಹಣ ಪಾವತಿಸಲಾಗಿದೆ? (ಪೂರ್ಣ ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

----

15/4/719

**ಮೊರಾರ್ಜಿ ವಸತಿ ಶಾಲೆ ಮಂಜೂರಾತಿ**

760 **ಆನಂದ ಅಲಿಯಾಸ್ ವಿಶ್ವನಾಥ ಚಂದ್ರಶೇಖರ ಮಾಮನಿ (ಸವದತ್ತಿ ಯಲ್ಲಮ್ಮ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸವದತ್ತಿ ಯಲ್ಲಮ್ಮಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸತ್ತಿಗೇರಿ ಮೊರಾರ್ಜಿ ವಸತಿ ಶಾಲೆಗಳು ಅತೀ ಅವಶ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಈಗಾಗಲೇ ಸತ್ತಿಗೇರಿ ಮೊರಾರ್ಜಿ ವಸತಿ ಶಾಲೆ ಮಂಜೂರಾತಿ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಶಾಲೆಯನ್ನು ಮಂಜೂರು ಮಾಡಲು ತೆಗೆದುಕೊಂಡ ಕ್ರಮವೇನು? (ವಿವರಗಳನ್ನು ಒದಗಿಸುವುದು)

----

15/4/720

**ಪ್ರಗತಿ ಯೋಜನೆ ಮಂಜೂರಾತಿ**

761 **ಆನಂದ ಅಲಿಯಾಸ್ ವಿಶ್ವನಾಥ ಚಂದ್ರಶೇಖರ ಮಾಮನಿ (ಸವದತ್ತಿ ಯಲ್ಲಮ್ಮ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸವದತ್ತಿ-ಯಲ್ಲಮ್ಮಾ ವಿಧಾನಸಭಾ ಕ್ಷೇತ್ರಕ್ಕೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿ ಅಭಿವೃದ್ಧಿ ಪಡಿಸಲು, "ಪ್ರಗತಿ ಕಾಲೋನಿ ಯೋಜನೆಯು" ಅನುಷ್ಠಾನಗೊಂಡಿದೆಯೇ;
ಆ) ಹಾಗಿದ್ದಲ್ಲಿ, ಸದರಿ ಯೋಜನೆಯಡಿ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ; ಆಯ್ಕೆ ಮಾಡದೇ ಇದ್ದಲ್ಲಿ, ಕಾರಣವೇನು; (ವಿವರಣೆ ನೀಡುವುದು)
ಇ) ಸವದತ್ತಿ-ಯಲ್ಲಮ್ಮಾ ವಿಧಾನಸಭಾ ಕ್ಷೇತ್ರಕ್ಕೆ ಸದರಿ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲಾಗುವುದು? (ವಿವರಣೆ ನೀಡುವುದು)

----

15/4/139

**ಮೀನುಗಾರಿಕೆಗೆ ತರಬೇತಿ.**

762 **ಅನಿಲ್ ಚಿಕ್ಕಮಾದು (ಹೆಗ್ಗಡದೇವನ ಕೋಟೆ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಅಧಿಕಾರಿ/ ನೌಕರರಿಗೆ ಮೀನುಗಾರಿಕೆ ಇಲಾಖೆಯಲ್ಲಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆಯೇ;
ಆ) ಕಳೆದ 3 ವರ್ಷಗಳಲ್ಲಿ ಅಧಿಕಾರಿ/ನೌಕರರಿಗೆ ನೀಡಲಾದ ತರಬೇತಿಗಳಾವುವು; (ವಿವರ ನೀಡುವುದು;

ಇ) ತರಬೇತಿಯಿಂದ ಅಧಿಕಾರಿ/ನೌಕರರ ಕಾರ್ಯಕ್ಷಮತೆಯಲ್ಲಿ ಬದಲಾವಣೆಯಾಗಿದೆಯೇ;

ಈ) ಕಳೆದ 3 ವರ್ಷಗಳಲ್ಲಿ ಇಲಾಖೆಯಿಂದ ರೈತರಿಗೆ ನೀಡಿದ ತರಬೇತಿಯ ವಿವರವೇನು? (ಫಲಾನುಭವಿಗಳ ಪಟ್ಟಿಯೊಂದಿಗೆ ವೆಚ್ಚವಾದ ಅನುದಾನದ ವಿವರ ನೀಡುವುದು)

----

15/4/956

**ವಿದ್ಯಾರ್ಥಿ ನಿಲಯ ಅಭಿವೃದ್ಧಿ**

763 **ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬರುವ ವಿದ್ಯಾರ್ಥಿ ನಿಲಯಗಳೆಷ್ಟು; ಅವು ಯಾವುವು;

ಆ) ಸದರಿ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದ ಕಾರಣ ಎಲ್ಲರಿಗೂ ಪ್ರವೇಶಾತಿ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹೊಸ ವಿದ್ಯಾರ್ಥಿ ನಿಲಯ ಪ್ರಾರಂಭಿಸಲು ಸರ್ಕಾರದ ಕ್ರಮ ಹಾಗೂ ಇರುವ ಮಾನದಂಡಗಳಾವುವು;

ಇ) ಪ್ರಸ್ತುತ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವುದರಿಂದ ದುರಸ್ತಿಗೆ ಸರ್ಕಾರ ಕೈಗೊಂಡ ಕ್ರಮವೇನು?

----

15/4/957

**ಅನುದಾನ**

764 **ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಗತಿ ಕಾಲೋನಿಗಳ ಅಭಿವೃದ್ಧಿಗೆ 201819ನೇ ಸಾಲಿನಲ್ಲಿ ಯಾವ ಯಾವ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಅನುದಾನ ನೀಡಲಾಗಿದೆ;

ಆ) ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಿವೆ;

ಇ) ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಪ್ರಗತಿ ಕಾಲೋನಿ ಅಭಿವೃದ್ಧಿಗೆ ಎಷ್ಟು ಅನುದಾನ ನೀಡಲಾಗಿದೆ;

ಈ) 201920ನೇ ಸಾಲಿನಲ್ಲಿ ಪ್ರಗತಿ ಕಾಲೋನಿ ಅಭಿವೃದ್ಧಿಗೆ ಅನುದಾನ ನೀಡಲು ಸರ್ಕಾರದ ಕ್ರಮವೇನು?

----

15/4/958

**ಪಶು ಚಿಕಿತ್ಸಾಲಯಗಳು**

765 **ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಎಮ್ಮೆ ಸಾಕಾಣಿಕೆದಾರರು ಹೆಚ್ಚಿನ ಸಂಖ್ಯೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ, ಬೆಳಗಾವಿ ಉತ್ತರದಲ್ಲಿ ಎಷ್ಟು ಪಶು ಚಿಕಿತ್ಸಾಲಯಗಳಿವೆ (ವಿವರ ನೀಡುವುದು);
ಇ) ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೇಗೇರಿಸುವುದು ಮತ್ತು ಹೊಸ ಪಶು ಚಿಕಿತ್ಸಾಲಯ ಪ್ರಾರಂಭಿಸಲು ಸರ್ಕಾರದ ಕ್ರಮವೇನು;
ಇ) ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಯಾವ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೇಗೇರಿಸಲು ಸರ್ಕಾರ ನಿರ್ಧರಿಸಿದೆ?

----

**15/4/130**

**ಅನುದಾನ ಬಿಡುಗಡೆ**

766 **ಅಪ್ಪಚ್ಚು (ರಂಜನ್) (ಮಡಿಕೇರಿ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೊಡಗು ಜಿಲ್ಲೆ ಮಡಿಕೇರಿಯಲ್ಲಿರುವ ಪುರಾತನ ಹಾಗೂ ಐತಿಹಾಸಿಕ ಹಿನ್ನೆಲೆಯುಳ್ಳ ಕೋಟೆಯ ಮೇಲ್ಛಾವಣಿಯು ಕುಸಿಯುತ್ತಿದ್ದು, ಮುಂದಿನ ಮಳೆಗಾಲದಲ್ಲಿ ಗೋಡೆಯು ಸಹ ಕುಸಿಯುವ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ; ಈ ಕೋಟೆಯ ನವೀಕರಣಕ್ಕೆ ಸರ್ಕಾರ ಎಷ್ಟು ಅನುದಾನ ಮೀಸಲಿಟ್ಟಿದೆ ಹಾಗೂ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು; (ಪೂರ್ಣ ವಿವರ ನೀಡುವುದು)
ಆ) ರಾಜ್ಯದಲ್ಲಿ ಪ್ರವಾಸೋಧ್ಯಮ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಿಂದ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ಕ್ಷೇತ್ರವಾರು ಪೂರ್ಣ ವಿವರ ನೀಡುವುದು)
ಇ) ಕೊಡಗು ಜಿಲ್ಲೆಯಲ್ಲಿ ಎಷ್ಟು ಹೋಂ ಸ್ಟೇ ರೆಸಾರ್ಟ್‌ಗಳಿವೆ; ಯಾರ ಯಾರ ಹೆಸರಿನಲ್ಲಿ ಕಾರ್ಯಾಚರಣೆಯಲ್ಲಿವೆ;
ಈ) ಎಷ್ಟು ರೆಸಾರ್ಟ್ ಹೋಂ ಸ್ಟೇ ಗಳಿಗೆ ಸರ್ಕಾರದ ಅನುಮೋದನೆ ಪಡೆಯಲಾಗಿದೆ:; ಅನುಮೋದನೆ ಪಡೆಯದ ರೆಸಾರ್ಟ್ ಮತ್ತು ಹೋಂ ಸ್ಟೇ ಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;? (ಸದರಿ ಹೋಂ ಸ್ಟೇ ರೆಸಾರ್ಟ್ ಗಾಗಿ ಭೂ ಪರಿವರ್ತನೆಮಾಡಿದ ಪೂರ್ಣ ವಿವರನೀಡುವುದು)

----

**15/4/131**

**ವಸತಿ ಶಾಲೆಗಳಿಗೆ ಮೂಲ ಸೌಕರ್ಯ**

767 **():**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಅಂಬೇಡ್ಕರ್ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ; ಈ ಪೈಕಿ ಎಷ್ಟು ಶಾಲೆಗಳು ಸ್ವಂತ ಕಟ್ಟಡ ಹೊಂದಿವೆ; ಸ್ವಂತ ಕಟ್ಟಡ ಇಲ್ಲದ ಶಾಲೆಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;
ಆ) ಕಳೆದ ಎರಡು ವರ್ಷಗಳಿಂದ ಸೋಮವಾರ ಪೇಟೆಯಲ್ಲಿ ಮಂಜೂರಾಗಿ ಕಾರ್ಯನಿರ್ವಹಿಸುತ್ತಿರುವ ಅಂಬೇಡ್ಕರ್ ವಸತಿ ಶಾಲೆಗೆ ಹಾಸಿಗೆಯನ್ನೊಳಗೊಂಡಂತೆ ಮೂಲಭೂತ ಸೌಲಭ್ಯ ನೀಡದಿರುವುದು ಸರ್ಕಾರದ

ಗಮನಕ್ಕೆ ಬಂದಿದೆಯೇ;

ಇ) ಈ ಶಾಲೆಗೆ ತೋಳೂರು ಶೆಟ್ಟಳ್ಳಿಯಲ್ಲಿ ಜಾಗ ಕಾಯ್ದಿರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತವಾಗಿದೆಯೇ; ಹಾಗಿದ್ದಲ್ಲಿ ಈ ವರೆವಿಗೂ ಕ್ರಮ ಕೈಗೊಂಳ್ಳದಿರಲು ಕಾರಣವೇನು; (ಪೂರ್ಣ ವಿವರ ನೀಡುವುದು)

ಈ) ರಾಜ್ಯದಲ್ಲಿರುವ ಮೊರಾರ್ಜಿ ವಸತಿ ಶಾಲೆಗಳಲ್ಲಿ ಎಷ್ಟು ಜನ ಹೊರ ಗುತ್ತಿಗೆಯಡಿ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ; ಇವರನ್ನು ಖಾಯಂಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು? (ಕ್ಷೇತ್ರವಾರು ವಿವರ ನೀಡುವುದು)

----

15/4/132

**ಅನುದಾನದ ಬಿಡುಗಡೆ**

**768 ಅಪ್ಪಚ್ಚು (ರಂಜನ್) (ಮಡಿಕೇರಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ ಮೂರು ವರ್ಷಗಳಿಂದ ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ಕುಶಾಲನಗರ ಕೃಷಿ ಉತ್ಪನ್ನ ಮಾರುಕಟ್ಟೆಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಇದರಲ್ಲಿ ಎಷ್ಟು ಅನುದಾನ ಖರ್ಚಾಗಿದೆ? (ಕಾಮಗಾರಿವಾರು ಪೂರ್ಣ ವಿವರ ನೀಡುವುದು)

----

15/4/134

**ಸಹಕಾರ ಸಂಘದ ಅವ್ಯವಹಾರ**

**769 ಅಪ್ಪಚ್ಚು (ರಂಜನ್) (ಮಡಿಕೇರಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಎಷ್ಟು ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ; ಈ ಪೈಕಿ ಎಷ್ಟು ಸಹಕಾರ ಸಂಘಗಳು ಅವ್ಯವಹಾರಕ್ಕೆ ತುತ್ತಾಗಿವೆ; ಅವುಗಳ ಮೇಲೆ ತೆಗೆದುಕೊಂಡ ಕ್ರಮವೇನು; (ಕ್ಷೇತ್ರವಾರು ವಿವರ ನೀಡುವುದು)

ಆ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಎಷ್ಟು ಸಹಕಾರ ಸಂಘಗಳು ಕಾರ್ಯನಿರ್ವಹಿಸದೆ ಮುಚ್ಚಿಹೋಗಿವೆ;

ಇ) ಅಂತಹ ಸಂಘಗಳ ಆಸ್ತಿಗಳನ್ನು ಯಾವ ಸಂಸ್ಥೆಗಳಿಗೆ ನೀಡಲಾಗಿದೆ? (ಕ್ಷೇತ್ರವಾರು ವಿವರ ಒದಗಿಸುವುದು)

----

15/4/193

**ನಿಗಮದ ಸ್ಥಾಪನೆ**

**770 ಭಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಉಪ್ಪಾರ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಸಮಾಜದ ಆರ್ಥಿಕ ಅಭಿವೃದ್ಧಿಗೆ ಸರ್ಕಾರವು ಘೋಷಿಸಿರುವ ಯೋಜನೆಗಳಾವುವು; ಪ್ರಸಕ್ತ ಸಾಲಿನಲ್ಲಿ ಸರ್ಕಾರವು ಮೀಸಲಿಟ್ಟ ಅನುದಾನವೆಷ್ಟು; ಬಿಡುಗಡೆ ಮಾಡಿ ಖರ್ಚು ಮಾಡಲಾದ ಹಣವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

ಇ) ಬೆಳಗಾವಿ ಜಿಲ್ಲೆಯಲ್ಲಿ ಉಪ್ಪಾರ ಅಭಿವೃದ್ಧಿ ನಿಗಮದ ವತಿಯಿಂದ ಯಾವ ಯಾವ ಯೋಜನೆಗಳನ್ನು ಜಾರಿಗೆ ತರಲಾಗಿದೆ; ಈ ಯೋಜನೆಗಳಿಗೆ ಸರ್ಕಾರವು ಮೀಸಲಿಟ್ಟ ಖರ್ಚು ಮಾಡಿದ ಹಾಗೂ ಇದುವರೆಗೂ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)

----

15/4/194

**ಗಂಗಾ ಕಲ್ಯಾಣ ಯೋಜನೆ**

771 **ಭಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದಿಂದ ವೈಯಕ್ತಿಕ ಗಂಗಾ ಕಲ್ಯಾಣ ಯೋಜನೆಯಡಿ 07 ಹಾಗೂ ಸ್ವಯಂ ಉದ್ಯೋಗ ಯೋಜನೆಯಡಿ ಪ್ರತಿ ಜಿಲ್ಲೆಗೆ 72 ಗುರಿಯನ್ನು ನಿಗದಿಪಡಿಸಲಾಗಿರುವುದು ನಿಜವೇ;

ಆ) ನಿಗಮದ ಆಯ್ಕೆ ಸಮಿತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡಿದ್ದು, ಗುರಿ ಕಡಿಮೆ ಇರುವುದರಿಂದ ಈ ಯೋಜನೆಗಳ ಸೌಲಭ್ಯ ಕಲ್ಪಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)

ಈ) ಬೆಳಗಾವಿ ಜಿಲ್ಲೆಯಲ್ಲಿ ಉಪ್ಪಾರ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಇವರಿಗೆ ಸೌಲಭ್ಯಗಳನ್ನು ಕಲ್ಪಿಸಲಿಕ್ಕೆ ಸಾಧ್ಯವಾಗದ ಕಾರಣ ಈ ನಿಗಮಕ್ಕೆ ಹೆಚ್ಚಿನ ಗುರಿಯನ್ನು ನಿಗದಿಪಡಿಸಿ ಅಧ್ಯಕ್ಷತೆಯನ್ನು ಸ್ಥಳೀಯ ಶಾಸಕರು ವಹಿಸುವ ಆಯ್ಕೆ ಸಮಿತಿ ರಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು)

----

15/4/1224

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಯೋಜನೆಗಳು**

772 **ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಲಭ್ಯವಿರುವ ಯೋಜನೆಗಳಾವುವು; ಸದರಿ ಯೋಜನೆಗಳಿಗೆ ಸರ್ಕಾರವು ಮೀಸಲಿಟ್ಟಿರುವ ಅನುದಾನದ ಮೊತ್ತವೆಷ್ಟು; (ವಿವರ ನೀಡುವುದು)

ಆ) ವಿವಿಧ ಯೋಜನೆಗಳಡಿಯಲ್ಲಿ ಅರ್ಜಿ ಸಲ್ಲಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಸದರಿ ಅರ್ಜಿಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಈಗಾಗಲೇ ಅನುದಾನ ಮಂಜೂರಾತಿಯಾಗಿದೆ; ಬಾಕಿ ಉಳಿದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಅರ್ಜಿಗಳನ್ನು ಬಾಕಿ ಉಳಿಸಲು ಕಾರಣಗಳೇನು; (ಮಾಹಿತಿ ನೀಡುವುದು)

ಇ) ಈಗಾಗಲೇ ಫಲಾನುಭವಿಗಳಿಗೆ ಅನುದಾನ ಮಂಜೂರಾತಿ ಮಾಡಲಾಗಿದ್ದಲ್ಲಿ, ಅನುದಾನ ಮಂಜೂರಾತಿ ಮಾಡಿರುವ ಉದ್ದೇಶ ಹಾಗೂ ಫಲಾನುಭವಿಗಳೆಷ್ಟು; (ಹೆಸರು, ವಿಳಾಸದ ಸಂಪೂರ್ಣ ಮಾಹಿತಿ ನೀಡುವುದು)

ಈ) ವಿಜಯಪುರ ಜಿಲ್ಲೆಗೆ ಇಲಾಖೆಯಿಂದ ಬಿಡುಗಡೆಗೊಳಿಸಲಾದ ಅನುದಾನವೆಷ್ಟು; ಸದರಿ ಜಿಲ್ಲೆಯಲ್ಲಿ

ಎಷ್ಟು ಜನ ಫಲಾನುಭವಿಗಳು ಅರ್ಜಿ ಸಲ್ಲಿಸಿರುತ್ತಾರೆ; ಸಲ್ಲಿಸಿದ ಅರ್ಜಿಗಳಲ್ಲಿ ಈಗಾಗಲೇ ಎಷ್ಟು ಜನ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ; (ಹೆಸರು, ಉದ್ದೇಶ, ವಿಳಾಸ ಮತ್ತು ಮಂಜೂರಾದ ಅನುದಾನದ ವಿವರಗಳನ್ನುಒದಗಿಸುವುದು)

ಉ) ಸದರಿ ಇಲಾಖೆಯಿಂದ ಶಾಲಾ ಕಟ್ಟಡ, ವಸತಿ ನಿಲಯಗಳ ನಿರ್ಮಾಣಕ್ಕಾಗಿ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ; ಈಗಾಗಲೇ ಸದರಿ ಉದ್ದೇಶಕ್ಕಾಗಿ ಇಲಾಖೆಗೆ ಸಲ್ಲಿಸಲಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; ಸದರಿ ಅರ್ಜಿಗಳ ಪೈಕಿ ಎಷ್ಟು ಅರ್ಜಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ; ಬಾಕಿ ಉಳಿದಿರುವ ಅರ್ಜಿಗಳೆಷ್ಟು? (ವಿಧಾನಸಭಾವಾರು ಮೊತ್ತದ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

----

**15/4/1225**

## ಸಮಾಜ ಕಲ್ಯಾಣ ಇಲಾಖೆಯ ಯೋಜನೆಗಳು

**773 ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಯೋಜನೆಗಳಾವುವು; ಸದರಿ ಯೋಜನೆಗಳಿಗೆ ಇಲಾಖೆಯು ನಿಗದಿಪಡಿಸಿರುವ ಅನುದಾನ ಎಷ್ಟು; (ವಿವರವಾದ ಮಾಹಿತಿ ಒದಗಿಸುವುದು)

ಆ) ವಿಜಯಪುರ ಜಿಲ್ಲೆಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಯಾವ ಯಾವ ಯೋಜನೆಗಳಿಗೆ ಎಷ್ಟು ಅನುದಾನವನ್ನು ಮಂಜೂರು ಮಾಡಲಾಗಿದೆ; ಸದರಿ ಯೋಜನೆಯ ಅಡಿಯಲ್ಲಿ ಎಷ್ಟು ಜನ ಫಲಾನುಭವಿಗಳು ಅರ್ಜಿ ಸಲ್ಲಿಸಿರುತ್ತಾರೆ; ಸಲ್ಲಿಸಿದ ಅರ್ಜಿಗಳಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ; ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಅರ್ಜಿಗಳು ಬಾಕಿ ಉಳಿಯಲು ಕಾರಣವೇನು; (ಮಾಹಿತಿ ಒದಗಿಸುವುದು)

ಇ) ಈಗಾಗಲೇ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದಲ್ಲಿ, ಆಯ್ಕೆ ಮಾಡಿರುವ ಫಲಾನುಭವಿಗಳೆಷ್ಟು? (ಹೆಸರು, ವಿಳಾಸ ಮತ್ತು ಉದ್ದೇಶ ಮತ್ತು ಮಂಜೂರಾದ ಅನುದಾನದ ಸಂಪೂರ್ಣ ಮಾಹಿತಿ ಒದಗಿಸುವುದು)

----

**15/4/251**

## ಬೆಂಬಲ ಬೆಲೆ

**774 ಬಸವರಾಜ್ ಬೊಮ್ಮಾಯಿ (ಶಿಗ್ಗಾಂವ್):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಬೆಂಬಲ ಬೆಲೆ ಪಡೆಯುವಲ್ಲಿ ರೈತರಿಗಿಂತ ವರ್ತಕರೇ ಹೆಚ್ಚಿನ ಲಾಭ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು; ಇದರ ತಡೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ಯಾವ ಯಾವ ಕೃಷಿ ಮಾರುಕಟ್ಟೆಗಳಲ್ಲಿ ಇಂತಹ ಪ್ರಕರಣಗಳು ನಡೆಯುತ್ತಿವೆ; ಈ ಪ್ರಕರಣಗಳ ಬಗ್ಗೆ ನಿಗಾವಹಿಸಲು ಸರ್ಕಾರ ಮುಂದಾಗುವುದೇ ಹಾಗೂ ಯಾವ ಬೆಳೆಗಳ ಲಾಭವನ್ನು ವರ್ತಕರು ಪಡೆಯುತ್ತಿದ್ದಾರೆ (ವಿವರಗಳನ್ನು ಒದಗಿಸುವುದು);

ಇ) ಕೆಲವು ಭಾಗದಲ್ಲಿ ರೈತರಿಂದ ನೇರವಾಗಿ ಬೆಂಬಲ ಬೆಲೆ ಯೋಜನೆಯಡಿ ದವಸಧಾನ್ಯಗಳನ್ನು ಖರೀದಿಸಿ, ಅದೇ ದಾಸ್ತಾನನ್ನು ಪುನಃ ಕಡಿಮೆ ದರಕ್ಕೆ ವರ್ತಕರಿಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ; ಈ ಬಗ್ಗೆ ನಷ್ಟವಾದ ಪ್ರಕರಣಗಳೆಷ್ಟು? (ವಿವರ ಒದಗಿಸುವುದು);

----

15/4/252

**ಬೆಂಬಲ ಬೆಲೆ ನಿಗದಿಗೊಳಿಸುವುದು**

775 **ಬಸವರಾಜ್ ಬೊಮ್ಮಾಯಿ (ಶಿಗ್ಗಾಂವ್):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆಗಳ ವಾರ್ಷಿಕ ವಹಿವಾಟೆಷ್ಟು (ಜಿಲ್ಲಾವಾರು ಪೂರ್ಣ ವಿವರ ಒದಗಿಸುವುದು);

ಆ) ಬೆಂಬಲ ಬೆಲೆ ನಿಗದಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ಹಾಗೂ ಬೆಳೆವಿಮೆಗೆ ಸೂಕ್ತ ಪರಿಹಾರ ದೊರಕಿಸಲು ಸರ್ಕಾರದ ಕ್ರಮಗಳೇನು (ವಿವರ ಒದಗಿಸುವುದು);

ಇ) ರಾಜ್ಯದಲ್ಲಿ ಕೃಷಿಕರ ಬೆಳೆ ಖರೀದಿಗೆ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ; ರಾಜ್ಯ ಸರ್ಕಾರದ ವತಿಯಿಂದಲೇ ರೈತರ ಕೃಷಿ ಉತ್ಪನ್ನಗಳನ್ನು ಖರೀದಿಸಲು ಇರುವ ತೊಂದರೆಗಳೇನು;

ಈ) ಹಾಗಿದ್ದಲ್ಲಿ, ಇದು ಯಾವಾಗಿನಿಂದ ಜಾರಿಗೆ ಬರಲಿದೆ?

----

15/4/253

**ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ**

776 **ಬಸವರಾಜ್ ಬೊಮ್ಮಾಯಿ (ಶಿಗ್ಗಾಂವ್):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಬಳಕೆಗೆ ಇರುವ ಮಾನದಂಡಗಳೇನು; ಈ ಯೋಜನೆಯಡಿ ರಾಜ್ಯ ಸರ್ಕಾರಕ್ಕಿರುವ ಗುರಿಯೆಷ್ಟು;

ಆ) ಇದುವರೆವಿಗೂ ಸಾಧಿಸಿರುವ ಪ್ರಗತಿಯ ವಿವರಗಳೇನು; ಪ್ರಗತಿಯಲ್ಲಿನ ಕಳಪೆ ಗುರಿಗೆ ಕಾರಣಗಳೇನು; ಸದರಿ ಯೋಜನೆಯ ಪೂರ್ಣ ಪ್ರಯೋಜನ ರಾಜ್ಯದ ರೈತರಿಗೆ ಸಿಗುವಂತೆ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು (ಜಿಲ್ಲಾವಾರು ವಿವರ ಒದಗಿಸುವುದು);

ಇ) ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿಯ ಸಮರ್ಪಕ ಬಳಕೆಗೆ ಸರ್ಕಾರ ಅನುಸರಿಸುವ ಮಾರ್ಗಸೂಚಿಗಳೇನು?

----

15/4/254

**ಸಾಲ ಮನ್ನಾ ಯೋಜನೆ**

777 **ಬಸವರಾಜ್ ಬೊಮ್ಮಾಯಿ (ಶಿಗ್ಗಾಂವ್):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ರೈತರ ಬೆಳೆ ಸಾಲ ಮನ್ನಾ ಯೋಜನೆಯಡಿ ಇದುವರೆಗೂ ವಾಣಿಜ್ಯ ಬ್ಯಾಂಕ್ ಮತ್ತು ಸಹಕಾರಿ ಬ್ಯಾಂಕುಗಳಿಗೆ ಬಿಡುಗಡೆಯಾಗಿರುವ ಮೊತ್ತವೆಷ್ಟು;

ಆ) ಇದರಲ್ಲಿ ವಾಣಿಜ್ಯ ಬ್ಯಾಂಕುಗಳಿಗೆ ಹಾಗೂ ಸಹಕಾರಿ ಬ್ಯಾಂಕುಗಳಿಗೆ ಬಿಡುಗಡೆಯಾದ ಮೊತ್ತವನ್ನು ರೈತರ ಸಾಲ ಖಾತೆಗಳಿಗೆ ಜಮಾ ಮಾಡಲಾಗಿದೆಯೇ;

ಇ) ಎಷ್ಟು ರೈತರ ಸಾಲದ ಖಾತೆಗಳಿಗೆ ಜಮಾ ಮಾಡಲು ಬಾಕಿ ಇರುತ್ತವೆ; ಉಳಿದ ಬೆಳೆ ಸಾಲದ ಮೊತ್ತವನ್ನು ಯಾವಾಗ ಖಾತೆಗಳಿಗೆ ಬಿಡುಗಡೆ ಮಾಡಲಾಗುತ್ತದೆ;

ಈ) ಇದಕ್ಕೆ ಅನುಸರಿಸುವ ಮಾನದಂಡಗಳೇನು; ಬಿಡುಗಡೆಯಾದ ಮೊತ್ತವನ್ನು ಸಮರ್ಪಕವಾಗಿ ಬ್ಯಾಂಕ್‌ಗಳು ಜಮಾ ಮಾಡದಿರುವ ಪ್ರಕರಣಗಳು ಬೆಳಕಿಗೆ ಬಂದಿವೆಯೇ;

ಉ) ಬಂದಿದ್ದಲ್ಲಿ, ಇವುಗಳ ಬಗ್ಗೆ ಸರ್ಕಾರದ ಕ್ರಮಗಳೇನು (ವಿವರ ಒದಗಿಸುವುದು)?

----

**15/4/255**

**ಸಾಲ ಮನ್ನಾ ಯೋಜನೆ**

**778 ಬಸವರಾಜ್ ಬೊಮ್ಮಾಯಿ (ಶಿಗ್ಗಾಂವ್):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ರಾಜ್ಯದಲ್ಲಿ ರೈತರ ಪೂರ್ಣ ಸಾಲ ಮನ್ನಾ ಮಾಡಲು ಸರ್ಕಾರ ಮುಂದಾಗುವುದೇ; ಇಲ್ಲದಿದ್ದಲ್ಲಿ, ಇದಕ್ಕೆಕಾರಣಗಳೇನು;

ಆ) ಸಾಲ ಮನ್ನಾ ಯೋಜನೆಗೆ ಸರ್ಕಾರ ರೂಪಿಸಿರುವ ಷರತ್ತುಗಳೇನು; ಸಾಲ ಮನ್ನಾಗೆ ವಿವಿಧ ನಿಬಂಧನೆಗಳನ್ನು ಹಾಕಲು ಯತ್ನಿಸುತ್ತಿರುವುದರಿಂದ ಸಾಲ ಮನ್ನಾ ಕಗ್ಗಂಟಾಗಿರುವುದು ನಿಜವೇ;

ಇ) ಸದರಿ ಪ್ರಕ್ರಿಯೆಗೆ ದಾಖಲೆ ಸಲ್ಲಿಸಲು ಅವಧಿ ನಿಗದಿಪಡಿಸಿದೆಯೇ; ಇವುಗಳ ತಾಳೆ ಹಾಕುವ ಕಾರ್ಯ ವಿಧಾನ ವಿಳಂಬ ಹಾಗೂ ಪರಿಶೀಲನೆ ನಡೆದಂತೆ ಸಾಲ ಮನ್ನಾ ಯೋಜನೆ ಸಮರ್ಪಕ ಅನುಷ್ಠಾನ ಸಾಧ್ಯವಿಲ್ಲವೆಂಬ ಬಗ್ಗೆ ಸರ್ಕಾರದ ನಿಲುವೇನು?

----

**15/4/1304**

**ಇಲಾಖೆಯ ಕಾರ್ಯಕ್ರಮಗಳು**

**779 ಬಸವರಾಜ್ ಮಟ್ಟಿಮುಡ್ (ಗುಲ್ಬರ್ಗಾ ಗ್ರಾಮಾಂತರ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಸಮಾಜ ಕಲ್ಯಾಣ ಇಲಾಖೆಯಿಂದ ದೊರೆಯುವ ವಿವಿಧ ಯೋಜನಾ ಸೌಲಭ್ಯಗಳಾವುವು;

ಆ) ಕಳೆದ ಮೂರು ವರ್ಷಗಳಲ್ಲಿ ಸಮಾಜಕಲ್ಯಾಣ ಇಲಾಖೆಯ ವತಿಯಿಂದ ಕಲಬುರಗಿ ಗ್ರಾಮೀಣ ವಿಧಾನಸಭೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು;

ಇ) ಬಿಡುಗಡೆಯಾದ ಅನುದಾನದಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳಾವುವು? (ಸಂಪೂರ್ಣ ಮಾಹಿತಿ ಒದಗಿಸುವುದು)

----

**ಐತಿಹಾಸಿಕ ಪ್ರಸಿದ್ಧ ಸುರಂಗಬಾವಿಗಳ ಕಾಮಗಾರಿ ಬಗ್ಗೆ**

**780** **ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -:-**

(ಅ) ರಾಜ್ಯದ ಐತಿಹಾಸಿಕ ಪ್ರಸಿದ್ಧ ಪಡೆದ ಸುರಂಗ ಬಾವಿ ((KAREZ)
ಕಾಮಗಾರಿಯನ್ನು ಯಾವ ಯಾವ ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿದೆ;
(ಪುನರುತ್ಥಾನದ ಕಾಮಗಾರಿ)

(ಆ) ಈ ಪ್ರಸಿದ್ಧ ಸುರಂಗ ಬಾವಿಗಳನ್ನು ಬೀದರ್ ಜಿಲ್ಲೆಯಲ್ಲಿ ಪತ್ತೆ ಹಚ್ಚಲಾಗಿದೆಯೇ ; ಪತ್ತೆ ಹಚ್ಚಿದ್ದಲ್ಲಿ ಅದಕ್ಕೆ ಸರ್ಕಾರ ಈವರೆಗೆ ಯಾವ ಯಾವ ಇಲಾಖೆಯಿಂದ ಎಷ್ಟು ಅನುದಾನ ಮಂಜೂರು ಮಾಡಿದೆ ;

(ಇ) ಈ ಪುನರುತ್ಥಾನದ ಕಾಮಗಾರಿ ಚಾಲ್ತಿಯಲ್ಲಿ ಇದೆಯೇ ಅಥವಾ ಸ್ಥಗಿತಗೊಳಿಸಲಾಗಿದೆಯೇ ; ಸ್ಥಗಿತಗೊಳಿಸಿದ್ದರೆ ಕಾರಣಗಳನ್ನು ತಿಳಿಸುವುದು ;

(ಈ) ಕಾಮಗಾರಿ ಪೂರ್ಣಗೊಳಿಸಿ ಪ್ರವಾಸಿ ತಾಣಗಳನ್ನಾಗಿ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಉ) ಕೇಂದ್ರ ಸರ್ಕಾರದ ಪ್ರಸಾದ್ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆ ಹಾಗೂ ಸುತ್ತಲಿನ ಜಿಲ್ಲೆಗಳು ಸೇರಿದಂತೆ ಪ್ರವಾಸೋದ್ಯಮ ಸರ್ಕ್ಯೂಟ್‌ನಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾದ ಪ್ರಸ್ತಾವನೆ ಯಾವ ಹಂತದಲ್ಲಿದೆ ?

----

**15/4/144**

## ಗಿರಿಜನರಿಗೆ ನೀಡಲಾದ ಹಕ್ಕುಪತ್ರಗಳು

**781** **ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೊಡಗು ಜಿಲ್ಲೆಯ ವನ್ಯಜೀವಿ ಅರಣ್ಯ ಪ್ರದೇಶದಲ್ಲಿ ಎಷ್ಟು ಗಿರಿಜನ ಹಾಡಿಗಳಿವೆ (ಹಾಡಿಗಳ ವಿವರಗಳನ್ನು ಅಭಯಾರಣ್ಯಗಳ ವ್ಯಾಪ್ತಿಗೆ ಒಳಪಟ್ಟಂತೆ ಪ್ರತ್ಯೇಕವಾಗಿ ವಿವರ ನೀಡುವುದು);

ಆ) ಅರಣ್ಯ ಹಕ್ಕು ಕಾಯ್ದೆಯಡಿ ಎಷ್ಟು ಗಿರಿಜನರಿಗೆ ಹಕ್ಕು ಪತ್ರ ವಿತರಿಸಲಾಗಿದೆ ಹಾಗೂ ಹಕ್ಕು ಪತ್ರ ನೀಡಲು ಬಾಕಿಯಿರುವ ಪ್ರಕರಣಗಳೆಷ್ಟು; (ವಿವರಗಳನ್ನು ವಿಳಾಸ, ವಿಸ್ತೀರ್ಣ ಸಮೇತ ನೀಡುವುದು);

ಇ) ಈ ಎಲ್ಲಾ ಗಿರಿಜನರಿಗೆ ಕುಡಿಯುವ ನೀರು, ರಸ್ತೆ ಸಂಪರ್ಕ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ;

ಈ) ಗಿರಿಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅರಣ್ಯ ಇಲಾಖೆಯವರು ಅಡ್ಡಿಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

----

**15/4/145**

## ರೈತರ ಬೆಳೆ ಸಾಲ

782 **ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರಿ ಸಂಸ್ಥೆಗಳಿಂದ ಎಷ್ಟು ಜನ ರೈತರು ಬೆಳೆ ಸಾಲ ಪಡೆದಿದ್ದಾರೆ; ಸಾಲದ ಒಟ್ಟು ಮೊತ್ತ ಎಷ್ಟು;(ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರಿ ಸಂಸ್ಥೆಗಳ ಪ್ರತ್ಯೇಕ ವಿವರವನ್ನು ಜಿಲ್ಲಾವಾರು ನೀಡುವುದು);

ಆ) ಈಗಾಗಲೇ ಮರು ಪಾವತಿ ಮಾಡಿರುವ ಬೆಳೆ ಸಾಲದ ಮೊತ್ತ ಎಷ್ಟು (ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರಿ ಸಂಸ್ಥೆಗಳ ಪ್ರತ್ಯೇಕ ವಿವರವನ್ನು ಜಿಲ್ಲಾವಾರು ನೀಡುವುದು);

ಇ) ರಾಜ್ಯದಲ್ಲಿ ರೈತರು ಪಡೆದಿರುವ ಸಾಲವನ್ನು ಸರ್ಕಾರ ಮನ್ನಾ ಮಾಡಿದೆಯೇ; ಹಾಗಿದ್ದಲ್ಲಿ, ಎಷ್ಟು ಜನ ರೈತರಿಗೆ ಸಾಲ ಮನ್ನಾ ಲಾಭವಾಗಿದೆ (ಜಿಲ್ಲಾವಾರು ವಿವರ ನೀಡುವುದು);

ಈ) ಸಾಲ ಮನ್ನಾ ಆದ ರೈತರಿಗೆ ಋಣಮುಕ್ತ ಪ್ರಮಾಣ ಪತ್ರ ನೀಡಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಜನ ರೈತರಿಗೆ ಋಣಮುಕ್ತ  ಪತ್ರ ನೀಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು);

ಉ) ಸಾಲ ಮನ್ನಾಕ್ಕಾಗಿ ಎಷ್ಟು ಹಣವನ್ನು ಮೀಸಲಿಡಲಾಗಿದೆ; ಈವರೆಗೆ ಎಷ್ಟು ಹಣ ಮರು ಪಾವತಿ ಮಾಡಲಾಗಿದೆ (ಸಂಪೂರ್ಣ ವಿವರ ನೀಡುವುದು);

ಊ) ರಾಜ್ಯದ ರೈತರ ಸಾಲ ಮನ್ನಾ ಯೋಜನೆಯ ಪ್ರಸ್ತುತ ವಾಸ್ತವಾಂಶವೇನು;(ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು)?

----

**15/4/146**

**ಸಾಲ ಮನ್ನಾ**

783 **ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯ ಸರ್ಕಾರವು ಮುಂಗಡ ಪತ್ರದಲ್ಲಿ ಘೋಷಣೆ ಮಾಡಿದಂತೆ ಸಾಲ ಮನ್ನಾಕ್ಕೆ ಎಷ್ಟು ಅರ್ಹ ರೈತರನ್ನು ಗುರುತಿಸಲಾಗಿದೆ (ರಾಷ್ಟ್ರೀಕೃತ ಬ್ಯಾಂಕ್‌ಗಳು, ಸಹಕಾರಿ ಬ್ಯಾಂಕ್‌ಗಳಲ್ಲಿ ಗುರುತಿಸಲಾದ ಅರ್ಹ ರೈತರ ಪಟ್ಟಿಯನ್ನು ಜಿಲ್ಲಾವಾರು ಪ್ರತ್ಯೇಕವಾಗಿ ನೀಡುವುದು);

ಆ) ಸಾಲ ಮನ್ನಾ ಪಡೆಯಲು ಇರುವ ಮಾನದಂಡಗಳೇನು (ವಿವರ ಒದಗಿಸುವುದು);

ಇ) ಈವರೆಗೆ ಎಷ್ಟು ಜನ ರೈತರಿಗೆ ಋಣಮುಕ್ತ ಪ್ರಮಾಣ ಪತ್ರ ನೀಡಲಾಗಿದೆ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು);

ಈ) ಈ ಯೋಜನೆ ಜಾರಿಗೊಳಿಸಲು ವಿಳಂಬವಾಗಿರಲು ಕಾರಣವೇನು; ಋಣಮುಕ್ತ ಪ್ರಮಾಣ ಪತ್ರವನ್ನು ಯಾವಾಗ ನೀಡಲಾಗುವುದು?

----

**15/4/245**

**ರೈತರ ಸಾಲ ಮನ್ನಾ**

784 **ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಪ್ರಸ್ತುತ ರಾಜ್ಯ ಸರ್ಕಾರದಿಂದ ಸಾಲ ಮನ್ನಾ ಯೋಜನೆಗೆ ಎಷ್ಟು ಅನುದಾನ ಹಂಚಿಕೆ ಮಾಡಲಾಗಿದೆ (ಬ್ಯಾಂಕುಗಳವಾರು ಅನುದಾನ ಹಂಚಿಕೆ ವಿವರ ನೀಡುವುದು);
ಆ) ಅದರಲ್ಲಿ ಯಾವ ಯಾವ ಬ್ಯಾಂಕುಗಳ ಫಲಾನುಭವಿಗಳು ಈ ಯೋಜನೆಯ ಲಾಭ ಪಡೆದಿದ್ದಾರೆ (ಬ್ಯಾಂಕುಗಳವಾರು ಫಲಾನುಭವಿಗಳ ಪಟ್ಟಿ ನೀಡುವುದು);
ಇ) ಯಾವ ದಿನಾಂಕದವರೆಗೆ ಸಾಲ ಮನ್ನಾದ ಅವಧಿಯನ್ನು ನಿಗದಿಗೊಳಿಸಿದೆ;
ಈ) ಸಾಲ ಮನ್ನಾ ಕೊನೆಯ ದಿನಾಂಕದ ಮೊದಲು ಸಾಲ ಮರುಪಾವತಿಸಿ ಅದರ ನಂತರ ಸಾಲ ಪಡೆದ ಪ್ರಾಮಾಣಿಕ ರೈತರಿಗೆ ಈ ಯೋಜನೆ ಅನ್ವಯಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಉ) ಹಾಗಿದ್ದಲ್ಲಿ, ಅಂತಹ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರದ ನೀತಿ ನಿಯಮಗಳೇನು?

----

**15/4/246**

## ರೈತರ ಸಾಲ ಮನ್ನಾ

785 **ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಇತ್ತೀಚೆಗೆ ಮಳೆಯ ಕೊರತೆಯಾಗಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ;
ಆ) ಹಾಗಿದ್ದಲ್ಲಿ, ಮಳೆಯ ಅಭಾವದಿಂದ ಬಿತ್ತನೆಯಾಗದೆ ಸಂಕಷ್ಟಕ್ಕೆ ಸಿಲುಕಿದ ರೈತರಿಗಾಗಿ ಸರ್ಕಾರ ಯಾವ ಹೊಸ ಯೋಜನೆಗಳನ್ನು ಹಾಕಿಕೊಂಡಿದೆ;
ಇ) ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಮಳೆಯ ಅಭಾವದಿಂದ ಸಂಕಷ್ಟಕ್ಕೆ ಸಿಲುಕಿದ ರೈತರ ನೆರವಿಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

----

**15/4/247**

## ಯೋಜನೆಗಳ ಅನುಷ್ಠಾನ

786 **ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಮೂರು ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಯಾವ ಯಾವ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಿದೆ (ಯೋಜನಾವಾರು, ಕ್ಷೇತ್ರವಾರು ಅನುದಾನದ ವಿವರ ನೀಡುವುದು);
ಆ) ಕಳೆದ ಮೂರು ವರ್ಷಗಳಿಂದ ಚನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಯಾವ ಯಾವ ಯೋಜನೆಗಳಿಗೆ ಬೇಡಿಕೆ ಬಂದಿವೆ;
ಇ) ಯಾವ ಯಾವ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ;
ಈ) ಅನುದಾನ ನೀಡಿಕೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಉ) ಸದರಿ ತಾರತಮ್ಯ ಸರಿಪಡಿಸಿ ಚನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಯೋಜನೆಗಳಿಗೆ ಅನುದಾನ ನೀಡಲು ಸರ್ಕಾರದ ಕ್ರಮವೇನು?

----

**15/4/248**

### ರೈತರ ಸಾಲ ಮನ್ನಾ

**787 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸಹಕಾರ ಸಂಘಗಳು, ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಶೆಡ್ಯೂಲ್ಡ್ ಬ್ಯಾಂಕುಗಳು ರೈತರ ಎಷ್ಟು ಸಾಲವನ್ನು ಮನ್ನಾ ಮಾಡುವುದಾಗಿ ಘೋಷಿಸಲಾಗಿತ್ತು (ವಿವರ ನೀಡುವುದು);
ಆ) ದಿನಾಂಕ:10.07.2018ರ ಮೊದಲು ಸಕಾಲಕ್ಕೆ ಸಾಲ ಮನ್ನಾ ಪಾವತಿಸಿ ನಂತರ ಸಾಲ ಪಡೆದ ರೈತರಿಗೆ ಸಾಲ ಮನ್ನಾದಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಸಾಲ ಮನ್ನಾ ಕೊನೆಯ ದಿನಾಂಕದ ನಂತರ ಅಂದರೆ ದಿನಾಂಕ:10.07.2018ರ ನಂತರ ದಿನಾಂಕ:31.07.2018ರವರೆಗೆ ವಿತರಿಸಲಾದ ಸಾಲಗಳನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;
ಈ) ರಾಷ್ಟ್ರೀಕೃತ ಬ್ಯಾಂಕುಗಳ ಮತ್ತು ಶೆಡ್ಯೂಲ್ಡ್ ಬ್ಯಾಂಕುಗಳ ಚಾಲ್ತಿ ಸಾಲಗಾರರ ಸಾಲ ಮನ್ನಾ ಆಗದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;
ಉ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು?

----

15/4/249

### ಯೋಜನೆಗಳ ಅನುಷ್ಠಾನ

**788 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ ಮೂರು ವರ್ಷಗಳಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಯಾವ ಯಾವ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು);
ಆ) ಚನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರ ಮೂರು ವರ್ಷಗಳಿಂದ ಯಾವ ಯಾವ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ; ಬೇಡಿಕೆಯಿರುವ ಯೋಜನೆಗಳಾವುವು;
ಇ) ಅನುದಾನ ಒದಗಿಸಿರುವಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಸದರಿ ತಾರತಮ್ಯ ಸರಿಪಡಿಸಿ ಚನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಯೋಜನೆಗಳಿಗೆ ಅನುದಾನ ನೀಡಲು ಸರ್ಕಾರ ಕೈಗೊಂಡ ಕ್ರಮವೇನು?

----

15/4/730

### ತೋಟಗಾರಿಕೆ ಬೆಳೆಗಳಿಗೆ ಪರಿಹಾರ

**789 ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳಿರುವ ಕ್ಷೇತ್ರವೆಷ್ಟು;( ಹೆಕ್ಟೇರ್‌ಗಳಲ್ಲಿ ಮಾಹಿತಿ ನೀಡುವುದು)
ಆ) ಮಳೆ ಅಭಾವದಿಂದ ಹಾನಿಯಾಗಿರುವ ಕ್ಷೇತ್ರವೆಷ್ಟು; ಯಾವ ಯಾವ ತೋಟಗಾರಿಕೆ ಬೆಳೆಗಳು ಹಾನಿಗೊಳಪಟ್ಟಿವೆ;(ಮಾಹಿತಿಯೊಂದಿಗೆ ಹಾನಿಗೊಳಗಾದ ಬೆಳೆಗಳ ಮೌಲ್ಯವೆಷ್ಟು)
ಇ) ಮಳೆ ಅಭಾವದಿಂದ ಹಾನಿಗೊಳಗಾದ ರೈತರಿಗೆ ನೀಡಿದ ಪರಿಹಾರದ ಮೊತ್ತವೆಷ್ಟು?( ತಾಲ್ಲೂಕುವಾರು ಮಾಹಿತಿ ನೀಡುವುದು)

----

15/4/731

## ತೊಗರಿ ಬೆಳೆಗೆ ಬೆಂಬಲ ಬೆಲೆ

790 **ಕಾರಜೋಳ ಗೋವಿಂದ ಮಕಟಪ್ಪ (ಮುದೋಳ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ತೊಗರಿ ಬೆಳೆಗೆ ನಿಗದಿಪಡಿಸಿರುವ ಕನಿಷ್ಠ ಬೆಂಬಲ ಬೆಲೆ (ಎಂ ಎಸ್ ಪಿ) ಎಷ್ಟು; ಕೇಂದ್ರ ಸರ್ಕಾರ ನೀಡುತ್ತಿರುವ ಬೆಂಬಲ ಬೆಲೆ ಎಷ್ಟು;( ಮಾಹಿತಿ ನೀಡುವುದು)
ಆ) ಸರ್ಕಾರವು ಕಳೆದ ಬಾರಿಗಿಂತಲೂ ಈ ಬಾರಿ ಕಡಿಮೆ ಪ್ರ,ಮಾಣದಲ್ಲಿ ಪ್ರೋತ್ಸಾಹಧನವನ್ನು ನಿಗದಿ ಪಡಿಸಿರುವುದಕ್ಕೆ ಕಾರಣವೇನು;
ಇ) ತೊಗರಿ ಬೆಳೆ ಬೆಲೆಗೆ, ಬೆಲೆ ಸ್ಥಿರೀಕರಣ ಮಾಡುವ ಪ್ರಸ್ತಾವನೆ ಸರ್ಕಾರದ ಗಮನಕ್ಕಿದೆಯೇ; ಬೆಲೆ ಸ್ಥಿರೀಕರಣ ವಿಷಯಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?( ಸಂಪೂರ್ಣ ಮಾಹಿತಿ ನೀಡುವುದು)

----

15/4/733

## ರೈತರ ಸಾಲ ಮನ್ನಾ

791 **ಕಾರಜೋಳ ಗೋವಿಂದ ಮಕಟಪ್ಪ (ಮುದೋಳ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರೈತರ ಸಾಲ ಮನ್ನಾ ಯೋಜನೆಯು ರಾಜ್ಯದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಂಡಿದೆಯೇ; ( ಪ್ರಗತಿಯ ವಿವರಗಳ ಜಿಲ್ಲಾವಾರು ಮಾಹಿತಿ ಒದಗಿಸುವುದು)
ಆ)ಸಾಲಮನ್ನಾ ಯೋಜನೆಯನ್ನು ಶೂನ್ಯಬಡ್ಡಿದರದಲ್ಲಿ ಸಾಲದ ಯೋಜನೆಯನ್ನಾಗಿ ರೂಪಿಸಲು ಸರ್ಕಾರ ಮುಂದಾಗಿದೆಯೇ;
ಇ) ಈ ಬಗ್ಗೆ ಎಷ್ಟು ಲಕ್ಷ ರೈತರಿಗೆ ಈ ಯೋಜನೆಯ ಪ್ರಯೋಜನ ದೊರೆಯಲಿದೆ; ಇದಕ್ಕಾಗಿ ಮೀಸಲಿಟ್ಟಿರುವ ಹಣವೆಷ್ಟು;
ಈ) ಯಾವ ಬ್ಯಾಂಕ್‌ಗಳ ಮೂಲಕ ಯಾವ ರೀತಿ ಸಾಲ ವಿತರಣೆ ಮಾಡಲಾಗುತ್ತದೆ, ಶೂನ್ಯ ಬಡ್ಡಿ ಅಂದರೆ ಹೇಗೆ ಈ ಮೊತ್ತವನ್ನು ರಾಜ್ಯ ಸರ್ಕಾರ ಸಹಾಯ ಧನದ ರೂಪದಲ್ಲಿ ರೈತರಿಗೆ ನೀಡುವುದೇ;( ಮಾಹಿತಿ ಒದಗಿಸುವುದು)
ಉ) ಈ ಹಿಂದೆ ಸಾಲ ಪಡೆದ ರೈತರಿಗೆ ಈ ಯೋಜನೆ ಅನ್ವಯವಾಗುವುದೇ ಹಾಗೂ ಹೊಸದಾಗಿ ಸಾಲ ಪಡೆದ ರೈತರಿಗೂ ಅನ್ವಯಿಸುವುದೇ?

----

15/4/734

## ಭೂ ಒಡೆತನ ಯೋಜನೆ

**792 ಕಾರಜೋಳ ಗೋವಿಂದ ಮಕಟಪ್ಪ (ಮುದೋಳ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ 2 ವರ್ಷಗಳಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಜನಾಂಗಕ್ಕೆ ಭೂ ಒಡೆತನ ಯೋಜನೆಯಡಿಯಲ್ಲಿ ಸರ್ಕಾರ ಖರೀದಿಸಿ ವಿತರಣೆ ಮಾಡಿದ ಜಮೀನಿನ ವಿಸ್ತೀರ್ಣವೆಷ್ಟು;
ಆ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಜನಾಂಗದವರು ಸದರಿ ಭೂ ಒಡೆತನ ಯೋಜನೆಯಡಿಯಲ್ಲಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು;( ವಿವರ ಒದಗಿಸುವುದು)
ಇ) ಸದರಿ ಭೂ ಒಡೆತನ ಮಂಜೂರು ಮಾಡದಿರುವುದಕ್ಕೆ ಕಾರಣವೇನು;
ಈ) 201819 ಮತ್ತು 201920 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಜನಾಂಗದವರಿಗೆ ಭೂ ಒಡೆತನ ಯೋಜನೆಯಡಿಯಲ್ಲಿ ಭೂಮಿ ಖರೀದಿಸಲು ನಿಗಧಿಪಡಿಸಿದ ಹಾಗೂ ಬಿಡುಗಡೆ ಮಾಡಿದ ಮೊತ್ತವೆಷ್ಟು;
ಉ) ಬಾಕಿ ಉಳಿದಿರುವ ಈ ಯೋಜನೆಯ ಫಲಾನುಭವಿಗಳಿಗೆ ಭೂಮಿ ಖರೀದಿಸಲು ಬೇಕಾಗುವ ಮೊತ್ತವೆಷ್ಟು; ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು?( ವಿವರ ಒದಗಿಸುವುದು)

----

15/4/959

## ಕೃಷಿ ಹೊಂಡಗಳ ನಿರ್ಮಾಣ

**793 ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ ಮೂರು ವರ್ಷಗಳಲ್ಲಿ ಆಳಂದ ತಾಲ್ಲೂಕಿನಲ್ಲಿ ಕೃಷಿ ಹೊಂಡ ನಿರ್ಮಿಸಿಕೊಂಡ ರೈತ ಫಲಾನುಭವಿಗಳ ಸಂಖ್ಯೆ ಎಷ್ಟು (ಹೆಸರು, ವಿಳಾಸ, ಸರ್ವೆ ನಂಬರ್ ಸಹಿತ ಸಂಪೂರ್ಣ ಮಾಹಿತಿ ನೀಡುವುದು);
ಆ) ಕೃಷಿ ಹೊಂಡ ನಿರ್ಮಿಸಿಕೊಂಡ ರೈತ ಫಲಾನುಭವಿಗಳಿಗೆ ಹಣ ಪಾವತಿಸಲಾಗಿದೆಯೇ; ಇನ್ನುಳಿದ ರೈತ ಫಲಾನುಭವಿಗಳಿಗೆ ಯಾವಾಗ ಹಣ ಪಾವತಿಸಲಾಗುವುದು (ವರ್ಷವಾರು ಪ್ರತ್ಯೇಕವಾಗಿ ಮಾಹಿತಿ ನೀಡುವುದು);
ಇ) ರಾಜ್ಯದಲ್ಲಿ ಪ್ರಸ್ತುತ ಸಾಲಿನಲ್ಲಿ ಕಿಸಾನ್ ಸಮ್ಮಾನ್ ಯೋಜನೆ ಜಾರಿಯಲ್ಲಿದೆಯೇ; ಕಿಸಾನ್ ಸಮ್ಮಾನ್ ಯೋಜನೆಯಡಿಯಲ್ಲಿ ಆಳಂದ ತಾಲ್ಲೂಕಿನಲ್ಲಿ ಗುರುತಿಸಿರುವ ರೈತ ಫಲಾನುಭವಿಗಳ ಸಂಖ್ಯೆ ಎಷ್ಟು (ರೌತ ಫಲಾನುಭವಿಗಳ ಹೆಸರು ಮತ್ತು ವಿಳಾಸ ನೀಡುವುದು);
ಈ) ಕಿಸಾನ್ ಸಮ್ಮಾನ್ ಯೋಜನೆಯಲ್ಲಿ ಆಳಂದ ತಾಲ್ಲೂಕಿನ ಎಷ್ಟು ಜನ ರೈತ ಫಲಾನುಭವಿಗಳಿಗೆ (ಮೂರು ತಿಂಗಳುಗಳಿಗೆ 2,000/ರಂತೆ) ಎಷ್ಟು ಕಂತುಗಳ ಹಣ ಜಮಾಕರಿಸಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು)?

----

15/4/960

## ರೈತರ ಬೆಳೆ ಸಾಲದ ಮನ್ನಾ

**794 ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ ಮೂರು ವರ್ಷಗಳಲ್ಲಿ ಆಳಂದ ತಾಲ್ಲೂಕಿನ ವ್ಯಾಪ್ತಿಯಲ್ಲಿ ಸರ್ಕಾರವು ಸಹಕಾರ ಸಂಘಗಳಲ್ಲಿನ ರೈತರ ಬೆಳೆ ಸಾಲವನ್ನು ಎಷ್ಟು ಬಾರಿ ಮನ್ನಾ ಮಾಡಲಾಗಿದೆ;
ಆ) ಯಾವ ಯಾವ ಸಹಕಾರ ಬ್ಯಾಂಕಿನಲ್ಲಿನ ರೈತರ ಬೆಳೆ ಸಾಲ ಮನ್ನಾ ಮಾಡಲಾಗಿದೆ (ಸಹಕಾರಿ ಸಂಘದ ಹೆಸರು, ರೈತರ ಹೆಸರು, ವಿಳಾಸ, ಖಾತೆ ಸಂಖ್ಯೆ ತೆಗೆದುಕೊಂಡ ಬೆಳೆ ಸಾಲದ ಮೊತ್ತ, ಸರ್ವೆ ನಂಬರ್‌ಗಳ ಸಂಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು)?

----

15/4/961

**ಮತ್ಸ್ಯಾಶ್ರಯ ಮನೆಗಳ ಅನುಷ್ಠಾನ**

**795 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳನ್ನು ಅನುಷ್ಠಾನಗೊಳಿಸಲು ರಾಜೀವ್‌ಗಾಂಧಿ ವಸತಿ ನಿಗಮಕ್ಕೆ ನೀಡಿರುವುದರಿಂದ 201718ನೇ ಸಾಲಿನಲ್ಲಿ ಮಂಜೂರಾತಿ ನೀಡಿದ ಮನೆಗಳು ಇನ್ನು ಪ್ರಗತಿ ಕಾಣದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಇದರಿಂದಾಗಿ ಬಹಳ ವರ್ಷಗಳಿಂದ ಅರ್ಜಿ ಸಲ್ಲಿಸಿ ಸಾಲ ಮಾಡಿ ಮನೆ ಮಾಡಿಕೊಂಡವರಿಗೆ ಹಣ ಸಿಗದೆ ಫಲಾನುಭವಿಗಳು ಸಾಲದ ಶೂಲಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಹಾಗಿದ್ದಲ್ಲಿ, ಮೀನುಗಾರಿಕಾ ಮನೆಗಳನ್ನು ಅನುಷ್ಠಾನಿಸಲು ರಾಜೀವಗಾಂಧಿ ವಸತಿ ನಿಗಮದಿಂದ ಮೀನುಗಾರಿಕೆ ಇಲಾಖೆಗೆ ಪುನಃ ನೀಡಲಾಗುವುದೇ?

----

15/4/962

**ಸಹಕಾರಿ ಸಂಘಗಳಲ್ಲಿ ಅಂಗವಿಕಲರಿಗೆ ಉದ್ಯೋಗ ನೀಡುವುದು**

**796 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ರಾಜ್ಯ ಸಹಕಾರಿ ಸಂಘಗಳಲ್ಲಿ ವಿದ್ಯಾರ್ಹತೆ ಹೊಂದಿದ ಅರ್ಹ ಅಂಗವಿಕಲ ಅಭ್ಯರ್ಥಿಗಳಿಗೆ ನೌಕರಿಯಲ್ಲಿ ಕಡ್ಡಾಯವಾಗಿ ಮೀಸಲಾತಿ ನೀಡಿ, ಮಾನವೀಯತೆ ನೆಲೆಯಲ್ಲಿ ಕಡ್ಡಾಯವಾರಿ ಉದ್ಯೋಗ ನೀಡುವ ಬಗ್ಗೆ ಆದೇಶ ಮಾಡುವಲ್ಲಿ ಸರ್ಕಾರದ ನಿಲುವೇನು?

----

15/4/968

**ಗಂಗಾ ಕಲ್ಯಾಣ ಯೋಜನೆ**

**797 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ವಿವಿಧ ಅಭಿವೃದ್ಧಿ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ವೈಯುಕ್ತಿಕ ಬಾವಿ ಫಲಾನುಭವಿಗಳಿಗೆ

ಬಾವಿ ನಿರ್ಮಿಸುವಾಗ No Water No Money ನಿಯಮ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕೊಳವೆ ಬಾವಿ ಕೊರೆಯಲು ಭೂಗರ್ಭ ಗಣಿ ಇಲಾಖೆಯ ವಿಜ್ಞಾನಿಗಳೇ ಫಲಾನುಭವಿಗಳಿಗೆ ಸ್ಥಳ ಗುರುತಿಸಿಕೊಟ್ಟ ನಂತರ ಗುತ್ತಿಗೆದಾರರು ಕೊಳವೆ ಬಾವಿ ತೋಡುವುದರಿಂದ ಕೊಳವೆ ಬಾವಿಯಲ್ಲಿ ನೀರು ಬಾರದೇ ಇದ್ದಾಗ ಗುತ್ತಿಗೆದಾರರಿಗೆ ಹಣ ಪಾವತಿಸದಿರುವುದು ಸರಿಯೇ; ಇದಕ್ಕೆ ಯಾರು ಹೊಣೆ;

ಇ) ಬೇರೆ ಬೇರೆ ಇಲಾಖೆಯ ಯೋಜನೆಗಳಲ್ಲಿ ಫಲಾನುಭವಿಗಳಿಗೆ ನೇರವಾಗಿ ಹಣ ಪಾವತಿಸುವಂತೆ ಗಂಗಾ ಕಲ್ಯಾಣ ಯೋಜನೆಯಲ್ಲಿಯೂ ಕೂಡ No Water No Money ನಿಯಮವನ್ನು ತೆಗೆದು ಫಲಾನುಭವಿಗಳೇ ನೇರವಾಗಿ ಕೊಳವೆ ಬಾವಿ ತೋಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದೇ ಹಾಗೂ ಕೊಳವೆ ಬಾವಿ ಕೊರೆಯಲು ಭೂಗರ್ಭ ಗಣಿ ಇಲಾಖೆಯ ವಿಜ್ಞಾನಿಗಳೇ ಫಲಾನುಭವಿಗಳಿಗೆ ಸ್ಥಳ ಗುರುತಿಸಿ ಕೊಟ್ಟಿರುವುದರಿಂದ ಕೊಳವೆ ಬಾವಿಯಲ್ಲಿ ನೀರು ಬಾರದಿದ್ದರೂ ಫಲಾನುಭವಿಗಳಿಗೆ ಹಣ ಪಾವತಿಸಲಾಗುವುದೇ?

----

**15/4/1318**

## ಕಾಮಗಾರಿಗಳಿಗೆ ಅನುದಾನ

**798 ಹರೀಶ್ ಪೂಂಜ (ಬೆಳ್ತಂಗಡಿ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ ಮೂರು ವರ್ಷಗಳಲ್ಲಿ ಬೆಳ್ತಂಗಡಿ ವಿಧಾನಸಭಾ ಕ್ಷೇತ್ರಕ್ಕೆ ಹಿಂದುಳಿದ ವರ್ಗಗಳ ಇಲಾಖೆಯಿಂದ ನೀಡಿರುವ ಅನುದಾನವೆಷ್ಟು;

ಆ) ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಯೋಜನೆಗೆ ಅನುದಾನ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ;

ಇ) ಯಾವ ಕಾಮಗಾರಿಗಳಿಗೆ ಅನುದಾನ ನೀಡಲು ಸರ್ಕಾರ ನಿರ್ಧರಿಸಿದೆ?

----

**15/4/1319**

## ರಬ್ಬರ್ ಬೆಳೆ ಬೆಲೆ ಕುಸಿತ

**799 ಹರೀಶ್ ಪೂಂಜ (ಬೆಳ್ತಂಗಡಿ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಲಕ್ಷಾಂತರ ಮಂದಿ ರೈತರು ರಬ್ಬರ್ ಬೆಳೆಯನ್ನು ಅವಲಂಬಿಸಿದ್ದು ರಬ್ಬರ್ ಬೆಲೆಯು ಪ್ರತಿ ವರ್ಷ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕೇರಳ ಮಾದರಿಯಲ್ಲಿ ರಬ್ಬರ್ ಬೆಳೆಗಾರರಿಗೆ ಬೆಂಬಲ ಬೆಲೆ ನಿಗದಿಪಡಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು;

ಇ) ಪ್ರಸ್ತುತ ಸಾಲಿನಲ್ಲಿ ರಬ್ಬರ್ ಬೆಲೆ ಕುಸಿತದಿಂದಾಗುವ ತೊಂದರೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

----

**15/4/1320**

## ಪ್ರವಾಸಿ ತಾಣಗಳ ಅಭಿವೃದ್ಧಿ

**800 ಹರೀಶ್ ಪೂಂಜ (ಬೆಳ್ತಂಗಡಿ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಪ್ರವಾಸೋದ್ಯಮಕ್ಕೆ ಅನುಕೂಲವಾಗುವ ಐತಿಹಾಸಿಕ ಸ್ಥಳಗಳಾವುವು; (ವಿವರ ನೀಡುವುದು)
ಆ) ನಡಗ್ರಾಮದ ನರಸಿಂಹಗಡದ ಐತಿಹಾಸಿಕ ಕೋಟೆ ಹಾಗೂ ಪ್ರಾಚೀನ ದೇವಾಲಯದ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

----

15/4/1321

**ಗಂಗಾ ಕಲ್ಯಾಣ ಯೋಜನೆ**

**801 ಹರೀಶ್ ಪೂಂಜ (ಬೆಳ್ತಂಗಡಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ 3 ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿನ ಸೌಲಭ್ಯಕ್ಕಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಗ್ರಾಮವಾರು ವಿವರ ಒದಗಿಸುವುದು)
ಆ) ಆಯ್ಕೆಯಾದ ಫಲಾನುಭವಿಗಳಿಗೆ ಇದುವರೆಗೂ ಕೊಳವೆ ಬಾವಿ ಕೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣವೇನು; ಈ ಬಗ್ಗೆ ಕಾಲಮಿತಿ ನಿಗದಿಗೊಳಿಸಲಾಗಿದೆಯೇ;
ಇ) ಆಯ್ಕೆಯಾದ ಫಲಾನುಭವಿಗಳು ಇದರಿಂದ ಅವಕಾಶ ವಂಚಿತರಾಗುವುದಿಲ್ಲವೇ; ಇದಕ್ಕೆ ಕಾರಣವೇನು?

----

15/4/1322

**ಅಡಿಕೆ ಬೆಳೆಗೆ ಕೊಳೆ ರೋಗ**

**802 ಹರೀಶ್ ಪೂಂಜ (ಬೆಳ್ತಂಗಡಿ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ 201819ನೇ ಸಾಲಿಗೆ ಕೊಳೆರೋಗಕ್ಕೆ ತುತ್ತಾಗಿ ಅಡಿಕೆ ಬೆಳೆ ಹಾನಿಗೊಳಗಾಗಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು; (ವಿವರ ನೀಡುವುದು)
ಆ) ಪರಿಹಾರ ವಿತರಿಸಿದ ಸಂತ್ರಸ್ಥರ ಸಂಖ್ಯೆ ಹಾಗೂ ಮೊತ್ತವೆಷ್ಟು; (ಸಂಪೂರ್ಣ ವಿವರ ನೀಡುವುದು)
ಇ) ಪರಿಹಾರ ನೀಡುವಲ್ಲಿ ಬಾಕಿಯಿರುವ ಮೊತ್ತವೆಷ್ಟು ಹಾಗೂ ನೀಡದಿರಲು ಕಾರಣವೇನು?

----

15/4/1305

**ಪ್ರವಾಸಿ ತಾಣಗಳು**

**803 ಬಿ. ಹರ್ಷವರ್ಧನ್ (ನಂಜನಗೂಡು):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) 201819ನೇ ಸಾಲಿನಲ್ಲಿ ರಾಜ್ಯದಲ್ಲಿನ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಬಿಡುಗಡೆಯಾಗಿರುವ ಅನುದಾನವೆಷ್ಟು; (ವಿವರ ಒದಗಿಸುವುದು)

ಆ) ನಂಜನಗೂಡು ಪ್ರವಾಸಿಗರ ತಾಣವೆನಿಸಿದ್ದು, ಇದನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರದಿಂದ 201819ನೇ ಸಾಲಿನಲ್ಲಿ ಯಾವುದಾದರೂ ಅನುದಾನವನ್ನು ನೀಡಲಾಗಿದೆಯೇ; ನೀಡಿದ್ದಲ್ಲಿ, ಹಾಕಿಕೊಂಡಿರುವ ಕಾರ್ಯಕ್ರಮಗಳೇನು; (ವಿವರಗಳನ್ನು ನೀಡುವುದು)
ಇ) ರಾಜ್ಯದ ಬೇರೆ ಬೇರೆ ಪ್ರವಾಸಿ ತಾಣಗಳಿಗೆ 201819ನೇ ಸಾಲಿನಲ್ಲಿ ನೀಡಿದ ಅನುದಾನದ ರೀತಿ, ನಂಜನಗೂಡು ಪ್ರವಾಸಿ ತಾಣವಾಗಿದ್ದರೂ ಸಹ ಅನುದಾನವನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಳ್ಳುವ ಕ್ರಮಗಳೇನು;
ಈ) ರಾಜ್ಯದಲ್ಲಿರುವ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಬಿಡುಗಡೆಗೊಳಿಸಲಾದ ಅನುದಾನ ಮತ್ತು ಕಾರ್ಯಪ್ರಗತಿಯ ಬಗ್ಗೆ ಇರುವ ನಿಯಮಾವಳಿಗಳೇನು; ಈ ನಿಯಮಾವಳಿಯಡಿಯಲ್ಲಿ ನಂಜನಗೂಡನ್ನು ಪ್ರವಾಸಿ ತಾಣವನ್ನಾಗಿ ಮಾಡಲು ಸರ್ಕಾರವು ಯಾವುದಾದರೂ ಯೋಜನೆ ರೂಪಿಸಿದೆಯೇ?

----

15/4/703

**ಮರಾಠ ಜನಾಂಗವನ್ನು 2ಎ ಗೆ ಸೇರಿಸುವುದು**

**804 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 2011ನೇ ಜನಗಣತಿಯನ್ನು ಆಧರಿಸಿ, ರಾಜ್ಯದ ವಿವಿಧ ಗ್ರಾಮಗಳಲ್ಲಿ ಮರಾಠಾ, ಹಿಂದೂ ಲಿಂಗಾಯತ ಆದಿ ಬನಜಿಗ, ಪಂಚಮಸಾಲಿ ಜನಾಂಗಗಳಿಗೆ ಸೇರಿದ ಜನಸಂಖ್ಯೆ ಎಷ್ಟು; (ಗ್ರಾಮಗಳವಾರು ಮಾಹಿತಿ ನೀಡುವುದು)
ಆ) ಪ್ರಸ್ತುತ ರಾಜ್ಯದಲ್ಲಿ ಮರಾಠಿ ಜನಾಂಗಕ್ಕೆ ಸೇರಿದವರನ್ನು ಯಾವ ವರ್ಗಕ್ಕೆ ಸೇರಿಸಲಾಗಿದೆ;
ಇ) ಮರಾಠಿ ಜನಾಂಗದವರನ್ನು "2ಎ" ವರ್ಗಕ್ಕೆ ಸೇರಿಸುವ ಉದ್ದೇಶವಾಗಲೀ, ಪ್ರಸ್ತಾವನೆಯಾಗಲೀ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ, ಯಾವಾಗ ಕಾರ್ಯರೂಪಕ್ಕೆ ತರಲಾಗುವುದು;
ಈ) ರಾಜ್ಯದಲ್ಲಿ ವಿವಿಧ ಜನಾಂಗಗಳ ವರ್ಗದವರನ್ನು ಇತರೆ ಬೇರೆ ಬೇರೆ ವರ್ಗಗಳ ಜನಾಂಗಕ್ಕೆ ಸೇರಿಸುವ ಉದ್ದೇಶವು ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಯಾವ ವರ್ಗವನ್ನು ಯಾವ ವರ್ಗಕ್ಕೆ ಸೇರಿಸಲಾಗುವುದು? (ಮಾಹಿತಿ ನೀಡುವುದು)

----

15/4/963

**ಕೃಷಿ ಇಲಾಖೆಯ ಯೋಜನೆಗಳು**

**805 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೃಷಿ ಇಲಾಖೆಯ ವತಿಯಿಂದ ರೈತರಿಗಾಗಿ ರೂಪಿಸಿರುವ ಯೋಜನೆಗಳಾವವು;
ಆ) 201920ನೇ ಸಾಲಿನಲ್ಲಿ ಕೃಷಿ ಇಲಾಖೆಗೆ ನಿಗದಿಪಡಿಸಿರುವ ಅನುದಾನವೆಷ್ಟು; ಅದರಲ್ಲಿ ಖರ್ಚಾದ ಅನುದಾನವೆಷ್ಟು (ಚಿಕ್ಕೋಡಿ/ನಿಪ್ಪಾಣಿ ಜಿಲ್ಲಾವಾರು, ತಾಲ್ಲೂಕುವಾರು ಹಾಗೂ ಮತಕ್ಷೇತ್ರವಾರು ಮಾಹಿತಿ ನೀಡುವುದು)?

----

15/4/964

## ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ

**806 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಇಲ್ಲಿವರೆಗೆ ನೊಂದಾಯಿಸಿಕೊಂಡ ರೈತರ ಸಂಖ್ಯೆ ಎಷ್ಟು;
ಆ) ಬೆಳಗಾವಿ ಜಿಲ್ಲೆಯ ಎಷ್ಟು ಮಂದಿ ರೈತರು ಈ ಯೋಜನೆಯಡಿ ನೊಂದಾಯಿಸಿದ್ದಾರೆ (ತಾಲ್ಲೂಕುವಾರು ಮಾಹಿತಿ ನೀಡುವುದು)?

----

15/4/965

## ಸಹಕಾರಿ ಸಂಘಗಳ ಸ್ಥಾಪನೆ

**807 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ದಿನಾಂಕ:01.04.2016 ರಿಂದ 30.06.2019ರವರೆಗೆ ಬೆಳಗಾವಿ ಜಿಲ್ಲೆಯಲ್ಲಿನ ವಿವಿಧ ಗ್ರಾಮಗಳಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೊಂದಣಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆಯೆಷ್ಟು (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು);
ಆ) ಮೇಲ್ಕಾಣಿಸಿದ ಅವಧಿಯಲ್ಲಿ ನೋಂದಣಿಯಾಗಿರುವ ಸಂಘಗಳೆಷ್ಟು ಮತ್ತು ಅವು ಯಾವುವು; ಯಾವ ಯಾವ ಮಾನದಂಡಗಳಡಿಯಲ್ಲಿ ನೊಂದಣಿ ಮಾಡಲಾಗಿದೆ; ನೊಂದಣಿಯಾಗದೇ ಬಾಕಿ ಇರುವ ಸಂಘಗಳೆಷ್ಟು; ಅವು ಯಾವುವು;
ಇ) ಮೇಲ್ಕಾಣಿಸಿದ ಅವಧಿಯಲ್ಲಿ ನೊಂದಣಿಗಾಗಿ ಬಂದಿರುವ ಸಂಘಗಳಲ್ಲಿ ರದ್ದುಪಡಿಸಿದ ಅರ್ಜಿಗಳ ಸಂಖ್ಯೆಯೆಷ್ಟು ಮತ್ತು ಅವು ಯಾವುವು; ಯಾವ ಮಾನದಂಡಗಳಡಿಯಲ್ಲಿ ಯಾವ ಕಾರಣಕ್ಕೆ ನೊಂದಣಿಯನ್ನು ರದ್ದುಪಡಿಸಲಾಗಿದೆ (ಬೆಳಗಾವಿ ಜಿಲ್ಲೆಯ ತಾಲ್ಲೂವಾರು ಸಂಪೂರ್ಣ ಮಾಹಿತಿ ನೀಡುವುದು)?

----

15/4/966

## ರೈತರ ಸಾಲ ಮನ್ನಾ

**808 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ರೈತರ ಸಾಲವನ್ನು ಯಾವ ಮಾನದಂಡಗಳ ಆಧಾರದ ಮೇಲೆ ಮನ್ನಾ ಮಾಡಲಾಗುತ್ತಿದೆ;
ಆ) ರಾಜ್ಯದಲ್ಲಿನ ರೈತರು ಪಡೆದ ಸಾಲವೆಷ್ಟು ಹಾಗೂ ಸಾಲ ಮನ್ನಾ ಯೋಜನೆಗೆ ಅರ್ಹತೆ ಹೊಂದಿದ ರೈತರ ಸಂಖ್ಯೆಯೆಷ್ಟು (ವಿವರ ಒದಗಿಸುವುದು);
ಇ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಎಷ್ಟು ರೈತರ ಸಾಲ ಮನ್ನಾ ಆಗಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು);

ಈ) ಬಾಕಿ ಉಳಿದ ರೈತರ ಸಾಲವನ್ನು ಮನ್ನಾ ಯಾವಾಗ ಮಾಡಲಾಗುವುದು ಹಾಗೂ ಬೆಳೆ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡಿದ ರೈತರಿಗೆ ಪ್ರೋತ್ಸಾಹ ಧನ ನೀಡಲಾಗಿದೆಯೇ (ಬೆಳಗಾವಿ ಜಿಲ್ಲೆಯ ತಾಲ್ಲೂಕುವಾರು ಮಾಹಿತಿ ನೀಡುವುದು)?

----

15/4/716

**ವಸತಿ ನಿಲಯಗಳು**

809 **ಎಸ್. ಕುಮಾರ್ ಬಂಗಾರಪ್ಪ (ಸೊರಬ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸೊರಬ ತಾಲ್ಲೂಕಿನ ಆನವಟ್ಟಿಯಲ್ಲಿ ಬಾಲಕರ ಹಾಗೂ ಬಾಲಕಿಯರ, ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೆಚ್ಚುವರಿ ವಸತಿ ನಿಲಯಗಳನ್ನು ಯಾವಾಗ ಮಂಜೂರು ಮಾಡಲಾಗುವುದು;
ಆ) ಸೊರಬ ತಾಲ್ಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳ ಕೊರತೆ ಇದ್ದು, ವಿದ್ಯಾರ್ಥಿಗಳು ನೆಲದ ಮೇಲೆ ಮಲಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

----

15/4/717

**ಪ್ರವಾಸಿ ಸ್ಥಳಗಳ ಅಭಿವೃದ್ಧಿ ಪಡಿಸುವುದು**

810 **ಎಸ್. ಕುಮಾರ್ ಬಂಗಾರಪ್ಪ (ಸೊರಬ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸೊರಬ ವಿಧಾನಸಭಾ ಕ್ಷೇತ್ರದಲ್ಲಿ ಪ್ರವಾಸೋದ್ಯಮ ಇಲಾಖೆ ಗುರುತಿಸಿರುವ ಪ್ರವಾಸಿ ಕೇಂದ್ರಗಳೆಷ್ಟು; ಗುರುತಿಸಿದ್ದಲ್ಲಿ, ಅವುಗಳ ಅಭಿವೃದ್ಧಿಗೆ, 201819 ಹಾಗೂ 201920 ರಲ್ಲಿ ಎಷ್ಟು ಅನುದಾನವನ್ನು ಇದುವರೆಗೆ ಸರ್ಕಾರ ಬಿಡುಗಡೆ ಮಾಡಲಾಗಿದೆ;
ಆ) ಚಂದ್ರಗುತ್ತಿ ಹಾಗೂ ಗುಡವಿ ಪಕ್ಷಿಧಾಮದ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವ ಯೋಜನೆ ಸರ್ಕಾರದ ಮುಂದಿದೆಯೇ;
ಇ) ಇದ್ದಲ್ಲಿ, ಯಾವಾಗ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು?

----

15/4/718

**ವೈಯಕ್ತಿಕ ಫಲಾನುಭವಿಗಳ ಆಯ್ಕೆ**

811 **ಎಸ್. ಕುಮಾರ್ ಬಂಗಾರಪ್ಪ (ಸೊರಬ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಡಿ. ದೇವರಾಜು ಅರಸು ಅಭಿವೃದ್ಧಿ ನಿಗಮದಡಿಯಲ್ಲಿ, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ವೈಯಕ್ತಿಕ ಸ್ವಯಂ ಉದ್ಯೋಗ ಸಾಲ, ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ ಹಾಗೂ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಬೆರಳೆಣಿಕೆಯಷ್ಟು ಗುರಿಯನ್ನು ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸದರಿ ಸೌಲಭ್ಯಗಳಿಗಾಗಿ ಅರ್ಜಿದಾರರು, ಜನಪ್ರತಿನಿಧಿಗಳ ಕುರಿತು ಬೇಸರ ವ್ಯಕ್ತಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇದನ್ನು ಬಗೆಹರಿಸಲು ಸರ್ಕಾರ ಯಾವ ಕ್ರಮ ಜರುಗಿಸಿದೆ;

ಈ) ಫಲಾನುಭವಿಗಳ ಆಯ್ಕೆ ನಂತರ ನಿಗಮದ ಅಡಿಯಲ್ಲಿ ಕೆಲಸ ಮಾಡುವ ಹೊರಗುತ್ತಿಗೆ ನೌಕರರ ಹೆಚ್ಚುವರಿ ಪಟ್ಟಿಗೆ ಜನ ಪ್ರತಿನಿಧಿಗಳ ಪತ್ರಗಳನ್ನು ಪಡೆದು ಹೊಸ ಹೆಸರುಗಸಳನ್ನು ಸೇರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

----

**15/4/721**

## ಭೂ ಒಡೆತನ ಯೋಜನೆ

**812 ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಭೂ ಒಡೆತನ ಯೋಜನೆ ಸಮರ್ಪಕವಾಗಿ ಯಶಸ್ವಿಯಾಗದಿರುವುದಕ್ಕೆ ಕಾರಣವೇನು; ಈ ಕುರಿತು ಸರ್ಕಾರಕ್ಕೆ ಮಾಹಿತಿ ಇದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ಆರ್ಥಿಕವಾಗಿ ಸಬಲೀಕರಣಗೊಳ್ಳಲು ಸರ್ಕಾರ ಕೈಗೊಂಡ ಕ್ರಮವೇನು?

----

**15/4/696**

## ನಗರ ಆಶ್ರಯ ಯೋಜನೆ

**813 ಲಾಲಾಜಿ ಆರ್. ಮೆಂಡನ್ (ಕಾಪು):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಉಡುಪಿ ಜಿಲ್ಲೆಯ ಕಾಪು ಪುರಸಭಾ ವ್ಯಾಪ್ತಿಯಲ್ಲಿ ಮೀನುಗಾರರ ಸಮುದಾಯದವರು ಹೆಚ್ಚಾಗಿ ವಾಸವಾಗಿರುವುದರಿಂದ, ಪುರಸಭೆಯ ನಗರ ಆಶ್ರಯ ಯೋಜನೆಯಲ್ಲಿ ನೀಡುವ ಅನುದಾನ 2,70,000/ ಇರುವುದು ನಿಜವೇ; ಮತ್ಸ್ಯಾಶ್ರಯ ಯೋಜನೆಯಲ್ಲಿ ಕೇವಲ 1,20,000/ ನಿಗದಿಯಾಗಿರುವುದು ಸರ್ಕಾರ ಗಮನಿಸಿದೆಯೇ;

ಆ) ಮತ್ಸ್ಯಾಶ್ರಯ ಯೋಜನೆಯಡಿ ಅನುದಾನ 2,70 ಲಕ್ಷಕ್ಕೆ ಹೆಚ್ಚಿಸಲು ಅವಕಾಶವಿದೆಯೇ; ಈ ಯೋಜನೆಗಳ ತಾರತಮ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

----

**15/4/697**

## ಮತ್ಸ್ಯಾಶ್ರಯ ವಸತಿ ಯೋಜನೆ

**814 ಲಾಲಾಜಿ ಆರ್. ಮೆಂಡನ್ (ಕಾಪು):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಾಪು ವಿಧಾನಸಭಾ ಕ್ಷೇತ್ರದ ಮೀನುಗಾರರ ಸಮುದಾಯದವರಿಗೆ ನೀಡುವ ಮತ್ಸ್ಯಾಶ್ರಯ ವಸತಿ ಯೋಜನೆಯ ಅನುಷ್ಠಾನವನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ವಹಿಸಿಕೊಟ್ಟಿರುವುದು ನಿಜವೇ;

ಆ) ಕರಾವಳಿ ಭಾಗದ ಹಲವಾರು ಮೀನುಗಾರರ ಸಮುದಾಯದವರಿಗೆ ಮನೆ ನಿರ್ಮಾಣದಲ್ಲಿ ತೊಂದರೆ ಉಂಟಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ;

ಇ) ಇಲ್ಲದಿದ್ದಲ್ಲಿ, ಈ ಹಿಂದೆ ಇದ್ದಂತೆ ಮತ್ಸ್ಯಾಶ್ರಯ ವಸತಿ ಯೋಜನೆಯನ್ನು ಮೀನುಗಾರಿಕಾ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?

----

15/4/11

## ಮುರಾರ್ಜಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು

**815 ಜೆ.ಸಿ. ಮಾಧು ಸ್ವಾಮಿ (ಚಿಕ್ಕನಾಯಕನಹಳ್ಳಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖಾವತಿಯಿಂದ ತಾಲ್ಲೂಕು ಮಟ್ಟದಲ್ಲಿ ನಿರ್ವಹಿಸುತ್ತಿರುವ ಮುರಾರ್ಜಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಸ್ವಂತ ಕಟ್ಟಡವಿರುವ ಹಾಗೂ ಬಾಡಿಗೆ ಕಟ್ಟಡದಲ್ಲಿರುವ ಶಾಲೆಗಳ ಸಂಖ್ಯೆಯೆಷ್ಟು;

ಇ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಟ್ಟಡವಿಲ್ಲದ ಸದರಿ ಶಾಲೆಗಳಿಗೆ ಕಟ್ಟಡ ನಿರ್ಮಿಸಲು ಹಣವೇನಾದರೂ ಒದಗಿಸುವಿರಾ?

----

15/4/12

## ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಿಗೆ ನೀಡಬೇಕಾಗಿರುವ ಹಣ

**816 ಜೆ.ಸಿ. ಮಾಧು ಸ್ವಾಮಿ (ಚಿಕ್ಕನಾಯಕನಹಳ್ಳಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಿಗೆ ಕೊಡಬೇಕಾಗಿರುವ ಸಾಲ ಮನ್ನಾ ಬಾಬ್ತು ಹಣವೆಷ್ಟು;

ಆ) ಇದುವರೆಗೆ ಸಾಲ ಮನ್ನಾ ಬಾಬ್ತು ಹಣ ಬಿಡುಗಡೆ ಮಾಡದಿರಲು ಕಾರಣವೇನು;

ಇ) ಇದರಿಂದಾಗಿ ಈ ಸಹಕಾರಿ ಬ್ಯಾಂಕುಗಳು ರೈತರಿಗೆ ಕೊಡಬೇಕಾದ ಸಾಲವನ್ನು ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

----

15/4/13

## ಸ್ಥಗಿತಗೊಂಡಿರುವ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕ್

817 **ಜೆ.ಸಿ. ಮಾಧು ಸ್ವಾಮಿ (ಚಿಕ್ಕನಾಯಕನಹಳ್ಳಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕ್ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಇದಕ್ಕೆ ಕಾರಣವೇನು;

ಇ) ಕನಿಷ್ಟ ಈ ಬ್ಯಾಂಕ್ ನಲ್ಲಿ ಪಡೆದ ಸಾಲ ಮನ್ನಾ ಬಡ್ಡಿ ಮನ್ನಾ ಮಾಡುವಲ್ಲಿ ಸರ್ಕಾರಕ್ಕಿರುವ ತೊಂದರೆಗಳೇನು?

----

15/4/14

**ಹನಿ ನೀರಾವರಿ ಸಬ್ಸಿಡಿ**

818 **ಜೆ.ಸಿ. ಮಾಧು ಸ್ವಾಮಿ (ಚಿಕ್ಕನಾಯಕನಹಳ್ಳಿ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ತುಮಕೂರು ಜಿಲ್ಲಾ ತೋಟಗಾರಿಕೆ ಇಲಾಖೆವತಿಯಿಂದ ವಿತರಿಸಬೇಕಾದ ಹನಿ ನೀರಾವರಿ ಸಬ್ಸಿಡಿ ಮೊತ್ತವೆಷ್ಟು;

ಆ) ಯಾವ ಸಾಲಿನಿಂದ ಸಬ್ಸಿಡಿ ಮೊತ್ತವನ್ನು ಉಳಿಸಿಕೊಂಡಿದೆ; ಸದರಿ ಸಬ್ಸಿಡಿ ಮೊತ್ತ ಬಿಡುಗಡೆ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು?

----

15/4/15

**ತೋಟಗಾರಿಕೆ ಇಲಾಖೆಯ ಜಮೀನು**

819 **ಜೆ.ಸಿ. ಮಾಧು ಸ್ವಾಮಿ (ಚಿಕ್ಕನಾಯಕನಹಳ್ಳಿ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿರುವ ತೋಟಗಾರಿಕೆ ಇಲಾಖೆಗೆ ಸೇರಿದ ಧರ್ಮವೀರ ಫಾರಂನ ಜಮೀನಿನ ವಿಸ್ತೀರ್ಣವೆಷ್ಟು;

ಆ) ಸದರಿ ಫಾರಂನಲ್ಲಿ ಈಗ ನಡೆಯುತ್ತಿರುವ ಚಟುವಟಿಕೆಗಳೇನು ಹಾಗೂ ಪ್ರಗತಿಯೇನು;

ಇ) ಸದರಿ ಜಮೀನನ್ನು ತೋಟಗಾರಿಕೆ ಇಲಾಖೆಯಿಂದ ಅರಣ್ಯ ಇಲಾಖೆಗೆ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು; ಈ ಬಗ್ಗೆ ಕ್ರಮ ಜರುಗಿಸಿರುವಿರಾ?

----

15/4/707

**ಮೂಲ ಸೌಕರ್ಯ ಕಲ್ಪಿಸುವುದು**

820 **ಮಹದೇವಪ್ಪ ಶಿವಲಿಂಗಪ್ಪ ಯಡವಾಡ್ (ರಾಮದುರ್ಗ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) 2018-19ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ರಾಜ್ಯದ ಪ್ರಸಿದ್ಧ ಸ್ಥಳಗಳಿಗೆ ಮೂಲ ಸೌಕರ್ಯ ಕಲ್ಪಿಸುವುದಕ್ಕೆ ಮಂಜೂರು ಮಾಡಲಾದ ಹಣವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)
ಆ) ಹಾಗಿದ್ದಲ್ಲಿ, ರಾಮದುರ್ಗ ತಾಲ್ಲೂಕಿಗೆ ಎಷ್ಟು ಹಣ ಮಂಜೂರು ಮಾಡಲಾಗಿದೆ; (ವಿವರ ಒದಗಿಸುವುದು)
ಇ) ಇಲ್ಲದಿದ್ದಲ್ಲಿ, ಅನುದಾನ ಬಿಡುಗಡೆ ಮಾಡದಿರಲು ಕಾರಣಗಳೇನು; (ವಿವರ ನೀಡುವುದು)
ಈ) ಜನ ಪ್ರತಿನಿಧಿಗಳನ್ನು ಸಂಪರ್ಕಿಸದೆ ಇಲಾಖೆಯಲ್ಲಿನ ರಾಮದುರ್ಗ ತಾಲ್ಲೂಕಿನ ಕೆಲವು ಸ್ಥಳಗಳಿಗೆ ಹಣ ಮಂಜೂರಾತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ಒದಗಿಸುವುದು)

----

15/4/136

**ಮೀಸಲಾತಿ ಹೆಚ್ಚಳ**

821 **ಎನ್. ಮಹೇಶ್ (ಕೊಳ್ಳೇಗಾಲ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಇತ್ತೀಚಿನ ಜನ ಸಂಖ್ಯೆ ಎಷ್ಟು; (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)
ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಇತ್ತೀಚಿನ ಜನ ಸಂಖ್ಯೆಗೆ ಅನುಗುಣವಾಗಿ ಉದ್ಯೋಗ ಮತ್ತು ಶಿಕ್ಷಣದ ಮೀಸಲಾತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;
ಇ) ಪರಿಶಿಷ್ಟ ಪಂಗಡ ಸಮುದಾಯಗಳು ಅವರ ಜನ ಸಂಖ್ಯೆಗೆ ಅನುಸಾರವಾಗಿ ಶೇ 7.5 ರಷ್ಟು ಮೀಸಲಾತಿ ನೀಡಬೇಕೆಂಬ ಬೇಡಿಕೆಯನ್ನು ಸರ್ಕಾರದ ಪರಿಶೀಲನೆಯಲ್ಲಿದೆಯೇ;
ಈ) ಹಾಗಿದ್ದಲ್ಲಿ, ಸರ್ಕಾರ ಅವರ ಬೇಡಿಕೆಯನ್ನು ಯಾವಾಗ ಈಡೇರಿಸುತ್ತದೆ;
ಉ)ಪರಿಶಿಷ್ಟ ಪಂಗಡಗಳ ಜೊತೆಗೆ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನೂ ಅವರ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಳ ಮಾಡಲಾಗುತ್ತದೆಯೇ? (ವಿವರ ಒದಗಿಸುವುದು)

----

15/4/1075

**ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ**

822 **ಎನ್. ಮಹೇಶ್ (ಕೊಳ್ಳೇಗಾಲ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ಬಾಲಕಬಾಲಕಿಯರ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳೆಷ್ಟು; ಈ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯೆಷ್ಟು;
ಆ) ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಅರ್ಜಿ ಸಲ್ಲಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರವೇಶಾವಕಾಶ ನೀಡಲಾಗುತ್ತಿದೆಯೇ;
ಇ) ಈ ವಿದ್ಯಾರ್ಥಿ ನಿಲಯಗಳಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರವೇಶಾವಕಾಶ ನೀಡಲಾಗದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಹಾಗಾದಲ್ಲಿ ಕಾರಣಗಳೇನು; (ಬಾಲಕಿಯರು ಮತ್ತು ಬಾಲಕರು ಪ್ರತ್ಯೇಕವಾಗಿ ವಿವರ ಒದಗಿಸುವುದು)
ಈ) ಸದರಿ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಾವಕಾಶ ಸಿಗದ ವಿದ್ಯಾರ್ಥಿಗಳು ಸ್ವಗ್ರಾಮದಿಂದ ಕಾಲೇಜು

ಇರುವ ನಗರಕ್ಕೆ ಪ್ರತಿನಿತ್ಯ ಪ್ರಯಾಣಿಸಲಾಗದೇ ಕಾಲೇಜು ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಕೆಲ ವಿದ್ಯಾರ್ಥಿ ನಿಲಯಗಳಲ್ಲಿ ಲಭ್ಯವಿರುವ ಕೊಠಡಿಗಳಲ್ಲಿಯೇ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿರುವುದರಿಂದ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕಪರಿಸರವು ಮಾಯವಾಗಿ, ತಮ್ಮ ವಾಸಕ್ಕಾಗಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಪರಿಹರಿಸಲು ಕೈಗೊಂಡ ಕ್ರಮಗಳೇನು; ಊ) ಹಾಗಿದ್ದಲ್ಲಿ ಹೆಚ್ಚುವರಿ ಪ್ರವೇಶ ನೀಡಲು ಇರುವ ತೊಂದರೆಗಳೇನು; ಅರ್ಜಿ ಸಲ್ಲಿಸಿ, ಪ್ರವೇಶಾವಕಾಶ ಕಲ್ಪಿಸಿ, ಕಾಲೇಜು ಶಿಕ್ಷಣ ಪೂರೈಸಲು ಅನುಕೂಲಮಾಡಿಕೊಡುವಲ್ಲಿ ಕೈಗೊಂಡಿರುವ ಕ್ರಮಗಳೇನು?

----

15/4/1218

### ಅಭಿವೃದ್ಧಿ ನಿಗಮದ ಯೋಜನೆಗಳು

**823 ಎ. ಮಂಜುನಾಥ್ (ಮಾಗಡಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) 201920ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ವಿವಿಧ ಯೋಜನೆಗಳ ಅಡಿಯಲ್ಲಿ ಸರ್ಕರ ನಿಗದಿಪಡಿಸಿದ ಅನುದಾನವೆಷ್ಟು;

ಆ) ಮಾಗಡಿ ವಿಧಾನಸಭಾ ಕ್ಷೇತ್ರಕ್ಕೆ 201920ನೇ ಸಾಲಿನಲ್ಲಿ ಸದರಿ ನಿಗಮದಿಂದ ವಿವಿಧ ಯೋಜನೆಯಡಿ ನಿಗದಿಪಡಿಸಿರುವ ಗುರಿಯೆಷ್ಟು;

ಇ) ಡಾ: ಎಂ. ನಂಜುಂಡಪ್ಪ ವರದಿಯಲ್ಲಿ ಉಲ್ಲೇಖಿಸಿರುವಂತೆ ಮಾಗಡಿ ತಾಲ್ಲೂಕು ಹಿಂದುಳಿದ ತಾಲ್ಲೂಕಾಗಿದ್ದು, ವಿವಿಧ ಯೋಜನೆಯಡಿ ನಿಗದಿಪಡಿಸಿದ ಗುರಿಗಿಂತಲೂ ಹೆಚ್ಚುವರಿಯಾಗಿ ಸೌಲಭ್ಯಗಳನ್ನು ಸದರಿ ನಿಗಮದಿಂದ ಕಲ್ಪಿಸಲಾಗುವುದೇ?

----

15/4/1219

### ಆಟಿಕೆಗಳಿಂದ ಅಪ್ರಾತ

**824 ಎ. ಮಂಜುನಾಥ್ (ಮಾಗಡಿ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಮಾಗಡಿ ವಿಧಾನಸಭಾ ಕ್ಷೇತ್ರದ ಬಿಡದಿ ಹೋಬಳಿಯ ಜಡೇನಹಳ್ಳಿ ಗ್ರಾಮದ ಸಮೀಪ ಮನರಂಜನೆಗಾಗಿ ಸ್ಥಾಪಿಸಿರುವ ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ಪ್ರತಿನಿತ್ಯ ಬರುವ ಪ್ರವಾಸಿಗರ ಸಂಖ್ಯೆಯೆಷ್ಟು; ಪ್ರವಾಸಿಗರ ಸುರಕ್ಷತೆಗಾಗಿ ತೆಗೆದುಕೊಂಡ ಕ್ರಮಗಳೇನು;

ಆ) ಸದರಿ ಪಾರ್ಕ್ ನಿರ್ಮಾಣವಾದಾಗಿನಿಂದಲೂ ಎಷ್ಟು ಅಪ್ರಾತಗಳು ಸಂಭವಿಸಿದೆ; ಈ ಬಗ್ಗೆ ಪರಿಹಾರ ನೀಡಲಾದ ಪ್ರಕರಣಗಳೆಷ್ಟು ಹಾಗೂ ಪ್ರತಿ ಪ್ರಕರಣಕ್ಕೆ ನೀಡಲಾದ ಪರಿಹಾರದ ಮೊತ್ತವೆಷ್ಟು;

ಇ) ಹಾಗಿದ್ದಲ್ಲಿ, ಮನರಂಜನೆಗಾಗಿ ಸ್ಥಾಪಿಸಲಾಗಿರುವ ಕೆಲವು ಸಾರ್ವಜನಿಕ ಆಟಿಕೆಗಳು ಅಸುರಕ್ಷಿತವಾಗಿರುವುದರಿಂದ ಅವುಗಳನ್ನು ನಿಷೇಧಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

----

15/4/1307

## ಇಂದಿರಾಗಾಂಧಿ ವಸತಿ ಶಾಲೆ

**825** **ಜಯರಾಮ್ ಎ.ಎಸ್. (ತುರುವೇಕೆರೆ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ತುರುವೇಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ತುರುವೇಕೆರೆ ತಾಲ್ಲೂಕು, ಮಾಯಸಂದ್ರ ಹೋಬಳಿ ಮಣೆಚೆಂಡೂರು ಗ್ರಾಮದ ಸ.ನಂ.33 ರಲ್ಲಿ 800 ಎ/ಗು ಜಮೀನು ಇಂದಿರಾಗಾಂಧಿ ಹಿಂದುಳಿದ ವರ್ಗಗಳ ವಸತಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಬಾಡಿಗೆ ಕಟ್ಟಡದಲ್ಲಿ ವ್ಯಾಸಂಗ ಮಾಡುತ್ತಿರುವ ಸುಮಾರು 250 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಮೂಲಭೂತ ಸೌಲಭ್ಯಗಳಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತುರ್ತಾಗಿ ಅನುದಾನ ಮಂಜೂರು ಮಾಡಿ ಸ್ವಂತ ಕಟ್ಟಡಗಳನ್ನು ನಿರ್ಮಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

----

15/4/722

## ಬಾಲಕ ಮತ್ತು ಬಾಲಕಿಯರ ವಸತಿನಿಲಯಗಳು

**826** **ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಎಷ್ಟು ವಸತಿನಿಲಯಗಳು ಕಾರ್ಯನಿರ್ವಹಿಸುತ್ತಿವೆ;( ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ಹಾಗೂ ಪದವಿ, ಬಾಲಕ ಮತ್ತು ಬಾಲಕಿಯರ ವಸತಿನಿಲಯಗಳ ಸಂಖ್ಯೆಗಳ ತಾಲ್ಲೂಕಾವಾರು ಮಾಹಿತಿ ನೀಡುವುದು)

ಆ) ಇವುಗಳ ಪೈಕಿ ಸ್ವಂತ ಕಟ್ಟಡವನ್ನು ಹೊಂದಿರುವ ಹಾಗೂ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ನಿಲಯಗಳೆಷ್ಟು;

ಇ) ಬಾಡಿಗೆ ಕಟ್ಟಡಗಳಲ್ಲಿರುವ ವಸತಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;

ಈ) ಹಾಗಿದ್ದಲ್ಲಿ ಸರ್ಕಾರ ಸದರಿ ವಸತಿ ನಿಲಯಗಳಿಗೆ ಸ್ವಂತ ಕಟ್ಟಡ ಒದಗಿಸಲು ಯಾವ ಕ್ರಮ ಕೈಗೊಳ್ಳುವುದು?( ಸಂಪೂರ್ಣ ಮಾಹಿತಿ ನೀಡುವುದು)

----

15/4/723

## ಪಶುವೈದ್ಯಕೀಯ ವಿಶ್ವ ವಿದ್ಯಾಲಯಗಳ ಕುರಿತು

**827** **ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಎಷ್ಟು ಪಶು ವೈದ್ಯಕೀಯ ವಿಶ್ವ ವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ; ಹಾಗೂ ಅವುಗಳ ಅಧೀನದಲ್ಲಿ ಎಷ್ಟು ಪಶುವೈದ್ಯಕೀಯ ಮಹಾ ವಿದ್ಯಾಲಯಗಳಿವೆ;( ಜಿಲ್ಲಾವಾರು, ತಾಲ್ಲೂಕುವಾರು

ವಿವರಗಳನ್ನು ತಿಳಿಸುವುದು)

ಆ) ಬೆಳಗಾವಿ ವಿಭಾಗದಲ್ಲಿ ಎಷ್ಟು ಪಶುವೈದ್ಯಕೀಯ ವಿಶ್ವ ವಿದ್ಯಾಲಯಗಳು ಮತ್ತು ಪಶು ವೈದ್ಯಕೀಯ ಮಹಾವಿದ್ಯಾಲಯಗಳಿವೆ;( ಮಾಹಿತಿ ಒದಗಿಸುವುದು)

ಇ) ಬೆಳಗಾವಿ ವಿಭಾಗದಲ್ಲಿ ಪಶುವೈದ್ಯಕೀಯ ವಿಶ್ವ ವಿದ್ಯಾಲಯವನ್ನು ಪ್ರಾರಂಭಿಸುವ ಚಿಂತನೆಯು ಸರ್ಕಾರದಲ್ಲಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಪ್ರಾರಂಭಿಸಲಾಗುವುದು;

ಈ) ಇಲ್ಲವಾದಲ್ಲಿ, ಪ್ರಾರಂಭಿಸದಿರುವುದಕ್ಕೆ ಕಾರಣಗಳೇನು;

ಉ) ಈ ಭಾಗದಲ್ಲಿ ಕೃಷಿ ಅವಲಂಬಿತ ಕುಟುಂಬಗಳು ಹೆಚ್ಚಾಗಿರುವುದರಿಂದ ಮತ್ತು ಜಾನುವಾರುಗಳ ಸಂಖ್ಯೆಯೂ ಸಹ ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಪಶುವೈದ್ಯಕೀಯ ವಿಶ್ವ ವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

----

15/4/724

**ಖಾಲಿಯಿರುವ ಹುದ್ದೆಗಳು**

**828 ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬಾಗಲಕೋಟೆಯಲ್ಲಿರುವ ತೋಟಗಾರಿಕಾ ವಿಜ್ಞಾನಗಳ ವಿಶ್ವ ವಿದ್ಯಾಲಯದಲ್ಲಿ ಮತ್ತು ಅದರ ಅಧೀನದಲ್ಲಿ ನಡೆಯುತ್ತಿರುವ ಮಹಾ ವಿದ್ಯಾಲಯಗಳಲ್ಲಿ ಮಂಜೂರಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳೆಷ್ಟು;

ಆ) ಮಂಜೂರಾದ ಹುದ್ದೆಗಳಲ್ಲಿ ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಮತ್ತು ಯಾವ ಕಾಲಮಿತಿಯಲ್ಲಿ ನೇಮಕಾತಿ ಪೂರ್ಣಗೊಳಿಸಲಾಗುವುದು?

----

15/4/725

**ವಸತಿ ನಿಲಯಗಳು**

**829 ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ವಸತಿ ನಿಲಯಗಳೆಷ್ಟು ; (ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ಹಾಗೂ ಪದವಿ, ಬಾಲಕ ಮತ್ತು ಬಾಲಕಿಯರ ವಸತಿನಿಲಯಗಳ ಸಂಖ್ಯೆಗಳೆಷ್ಟು; ( ತಾಲ್ಲೂಕಾವಾರು ಮಾಹಿತಿ ನೀಡುವುದು)

ಆ) ಇವುಗಳ ಪೈಕಿ ಸ್ವಂತ ಕಟ್ಟಡವನ್ನು ಹೊಂದಿರುವ ಹಾಗೂ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ನಿಲಯಗಳೆಷ್ಟು;

ಇ) ಬಾಡಿಗೆ ಕಟ್ಟಡಗಳಲ್ಲಿರುವ ವಸತಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;

ಈ) ಸರ್ಕಾರ ಸದರಿ ವಸತಿ ನಿಲಯಗಳಿಗೆ ಸ್ವಂತ ಕಟ್ಟಡ ಒದಗಿಸಲು ಯಾವ ಕ್ರಮ ಕೈಗೊಳ್ಳುವುದು?(

ಸಂಪೂರ್ಣ ಮಾಹಿತಿ ನೀಡುವುದು)

----

15/4/259

**ಕಾಲೋನಿಗಳ ಅಭಿವೃದ್ಧಿ**

830 **ಸಿ.ಎಂ.ನಿಂಬಣ್ಣನವರ್ (ಕಲಘಟಗಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಮೂರು ವರ್ಷಗಳಿಂದ ಕಲಘಟಗಿ ಮತಕ್ಷೇತ್ರಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಅನುದಾನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅನುದಾನ ವಂಚಿತ ಕಾಲೋನಿಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ;

ಇ) ಡಾ: ನಂಜುಂಡಪ್ಪ ಆಯೋಗದ ವರದಿ ಪ್ರಕಾರ ಅತೀ ಹಿಂದುಳಿದ ತಾಲ್ಲೂಕಾದ ಕಲಘಟಗಿ ತಾಲ್ಲೂಕಿಗೆ ಪ್ರಸ್ತುತ ಆರ್ಥಿಕ ಸಾಲಿನಲ್ಲಿ ಎಷ್ಟು ಅನುದಾನ ನಿಗದಿಗೊಳಿಸಲಾಗಿದೆ?

----

15/4/1076

**ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಅನುದಾನ**

831 **ಸಿ. ಎಸ್. ನಿರಂಜನ್ ಕುಮಾರ್ (ಗುಂಡ್ಲುಪೇಟೆ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯು ಜಾರಿಗೊಳಿಸುತ್ತಿರುವ ಯೋಜನೆಗಳಾವುವು; ಯಾವ ಯಾವ ಯೋಜನೆಗಳಿಗೆ ಎಷ್ಟು ಅನುದಾನವನ್ನು ಕಾಯ್ದಿರಿಸಲಾಗಿದೆ; (ವಿವರ ನೀಡುವುದು)

ಆ) ಕಳೆದ 3 ವರ್ಷಗಳಿಂದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಾಗಿ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಖರ್ಚು ಮಾಡಲಾಗಿರುವ ಅನುದಾನವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

ಇ) ಪ್ರಸಕ್ತ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಾಗಿ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಕ್ಕೆ ನಿಗದಿಪಡಿಸಿರುವ ಅನುದಾನವೆಷ್ಟು;

ಈ) ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಲ್ಲಿ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಅವು ಯಾವುವು? (ವಿವರ ನೀಡುವುದು)

----

15/4/1077

**ಕೃಷಿ ಯೋಜನೆಗಳು**

832 **ಸಿ. ಎಸ್. ನಿರಂಜನ್ ಕುಮಾರ್ (ಗುಂಡ್ಲುಪೇಟೆ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ 2 ವರ್ಷಗಳಲ್ಲಿ ಕೃಷಿ ಇಲಾಖೆಗೆ ನಿಗದಿಪಡಿಸಿರುವ ಅನುದಾನವೆಷ್ಟು; (ಯೋಜನಾವಾರು, ಕ್ಷೇತ್ರವಾರು ವಿವರ ನೀಡುವುದು)
ಆ) ಕೃಷಿ ಇಲಾಖೆಯಿಂದ ಇದುವರೆಗೂ ಯಾವ ಯಾವ ಯೋಜನೆಗಳನ್ನು ಜಾರಿಗೆ ತರಲಾಗಿದೆ; ಅವು ಯಾವುವು;
ಇ) 201617 ರಿಂದ ಇಲ್ಲಿಯವರೆಗೆ ಕೃಷಿ ಇಲಾಖೆಯ ವಿವಿಧ ಯೋಜನೆಗಳಿಂದ ರೈತರಿಗೆ ರಿಯಾಯಿತಿ ದರದಲ್ಲಿ ವಿತರಿಸಲಾಗಿರುವ ಉಪಕರಣಗಳು ಯಾವುವು; ರಿಯಾಯಿತಿಯ ಅನುಪಾತವೆಷ್ಟು;
ಈ) ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವಿವಿದ ಯೋಜನೆಗಳಿಂದ ರಿಯಾಯಿತಿ ದರದಲ್ಲಿ ವಿತರಿಸಿರುವ ಫಲಾನುಭವಿಗಳ ಸಂಖ್ಯೆಯೆಷ್ಟು; (ಸಂಪೂರ್ಣ ವಿವರ ನೀಡುವುದು)
ಉ) ಪ್ರಸಕ್ತ ಸಾಲಿನಲ್ಲಿ ಕೃಷಿ ಇಲಾಖೆಯಿಂದ ಹೊಸದಾಗಿ ಸೃಜಿಸಿರುವ ಯೋಜನೆಗಳಾವುವು? (ರೂಪುರೇಷೆ|ಗಳ ವಿವರ ನೀಡುವುದು)

----

15/4/1078

**ಮಧ್ಯವರ್ತಿಗಳ ಹಾವಳಿ**

**833 ಸಿ. ಎಸ್. ನಿರಂಜನ್ ಕುಮಾರ್ (ಗುಂಡ್ಲುಪೇಟೆ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಕೃಷಿಕರ ಬೆಳೆ ಖರೀದಿಗೆ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ವತಿಯಿಂದಲೇ ಕೃಷಿ ಉತ್ಪನ್ನಗಳನ್ನು ಖರೀದಿಸಲು ಇರುವ ತೊಂದರೆಗಳೇನು; ಸರ್ಕಾರಢ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡುವ ಬಗ್ಗೆ ಚಿಂತಿಸಿದೆಯೇ; (ವಿವರ ನೀಡುವುದು)
ಆ) ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆಗಳ ವಾರ್ಷಿಕ ವಹಿವಾಟೆಷ್ಟು; ( ಪ್ರಮುಖ ಮಾರುಕಟ್ಟೆಗಳವಾರು ಪೂರ್ಣ ವಿವರ ಒದಗಿಸುವುದು)
ಇ) ಬೆಂಬಲ ಬೆಲೆ ನಿಗದಿಗೆ ಸರ್ಕಾರ ಕೂಡಲೇ ಸ್ಪಂದಿಸಬೇಕಾಗಿದ್ದು, ಬೆಂಬಲ ಬೆಲೆಗೆ ಖರೀದಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

----

15/4/1079

**ಪ್ರವಾಸಿ ತಾಣಗಳ ಅಭಿವೃದ್ಧಿ**

**834 ಸಿ. ಎಸ್. ನಿರಂಜನ್ ಕುಮಾರ್ (ಗುಂಡ್ಲುಪೇಟೆ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಗುಂಡ್ಲುಪೇಟೆ ತಾಲ್ಲೂಕು ರಾಜ್ಯದ ಗಡಿ ಭಾಗದಲ್ಲಿರುವುದನ್ನು ಸರ್ಕಾರ ಗಮನಿಸಿದೆಯೇ; ಗಮನಿಸಿದ್ದಲ್ಲಿ, ಗಡಿಭಾಗದ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದಕ್ಕಾಗಿ ಕಳೆದ 3 ವರ್ಷಗಳಿಂದ ಎಷ್ಟು ಅನುದಾನವನ್ನು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರು ಮಾಡಲಾಗಿದೆ;
ಆ) ಈ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು)
ಇ) ಗಡಿ ಬಾಗದಲ್ಲಿ ಬರುವ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಎಷ್ಟು ಪ್ರವಾಸಿ ತಾಣಗಳಿವೆ; ಅವು ಯಾವುವು;

(ವಿವರ ಒದಗಿಸುವುದು)
ಈ) ಸದರಿ ಪ್ರವಾಸಿ ತಾಣಗಳು ಯಾವ ಅರಸರ ಕಾಲ ಘಟ್ಟದಲ್ಲಿ ಬರುತ್ತವೆ; ಈ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು;
ಉ) ಪ್ರಸಕ್ತ ಸಾಲಿನಲ್ಲಿ ಈ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಎಷ್ಟು ಅನುದಾನವನ್ನು ಮೀಸಲಿರಿಸಲಾಗುವುದು? (ವಿವರ ನೀಡುವುದು)

----

15/4/710

## ಮಂಜೂರಾದ ಕಾಮಗಾರಿಗಳು

835 **ಅಮೀನಪ್ಪ ಗೌಡ ಎಸ್ ಪಾಟೀಲ್ (ನಡಹಳ್ಳಿ) (ಮುದ್ದೇಬಿಹಾಳ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ 2 ವರ್ಷಗಳಿಂದ ವಿಜಯಪುರ ಜಿಲ್ಲೆ ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿವಿಧ ಭವನಗಳು, ಸಿ ಸಿ ರಸ್ತೆ ಕಾಮಗಾರಿ ಹಾಗೂ ಇತರೆ ಅಭಿವೃದ್ಧಿ ಕೆಲಸಗಳಿಗೆ ಎಷ್ಟು ಅನುದಾನ ಮಂಜೂರಾತಿ ದೊರೆತಿದೆ; (ಅಂಕಿ ಅಂಶ ಸಮೇತ ಕಾಮಗಾರಿ ಹೆಸರಿನೊಂದಿಗೆ ನೀಡಿರುವ ಅನುದಾನದ ಬಗ್ಗೆ ಸಂಪೂರ್ಣ ಮಾಹಿತಿ ಹಾಗೂ ಪ್ರಯೋಜನ ಪಡೆದವರಲ್ಲಿ ವೈಯಕ್ತಿಕ ಫಲಾನುಭವಿಗಳಿದ್ದಲ್ಲಿ ಫಲಾನುಭವಿಗಳ ಹೆಸರು ಸಮೇತ ವಿಳಾಸದೊಂದಿಗೆ ಮಾಹಿತಿ ಒದಗಿಸುವುದು)
ಆ) 2018-19 ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ; (ಕಾಮಗಾರಿ ಹೆಸರು ಗುತ್ತಿಗೆದಾರರ ಹೆಸರು ಸಮೇತ ಸಂಪೂರ್ಣ ವಿವರ ನೀಡುವುದು)
ಇ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರಕ್ಕೆ ನೀಡಿರುವ ಅನುದಾನ ಬಹಳ ಕಡಿಮೆಯಾಗಿದ್ದು, ಬೇರೆ ವಿಧಾನಸಭಾ ಕ್ಷೇತ್ರಗಳಿಗೆ ಹೋಲಿಸಿದ್ದಲ್ಲಿ, ತಾರತಮ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಬಂದಿದ್ದಲ್ಲಿ, ಸರಿಪಡಿಸಲು ಕೈಗೊಂಡ ಕ್ರಮವೇನು?

----

15/4/711

## ಮಂಜೂರಾದ ಕಾಮಗಾರಿಗಳು

836 **ಅಮೀನಪ್ಪ ಗೌಡ ಎಸ್ ಪಾಟೀಲ್ (ನಡಹಳ್ಳಿ) (ಮುದ್ದೇಬಿಹಾಳ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ವಿಜಯಪುರ ಜಿಲ್ಲೆ ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಕಳೆದ 2 ವರ್ಷಗಳಿಂದ ವಿವಿಧ ಭವನಗಳು, ಸಿ ಸಿ ರಸ್ತೆ ಕಾಮಗಾರಿ ಹಾಗೂ ಇತರೆ ಅಭಿವೃದ್ಧಿ ಕೆಲಸಗಳಿಗೆ ಎಷ್ಟು ಅನುದಾನ ಮಂಜೂರಾತಿ ದೊರೆತಿದೆ; (ಅಂಕಿ ಅಂಶ ಸಮೇತ ಕಾಮಗಾರಿ ಹೆಸರಿನೊಂದಿಗೆ ನೀಡಿರುವ ಅನುದಾನದ ಬಗ್ಗೆ ಸಂಪೂರ್ಣ ಮಾಹಿತಿ ಹಾಗೂ ಪ್ರಯೋಜನ ಪಡೆದವರಲ್ಲಿ ವೈಯಕ್ತಿಕ ಫಲಾನುಭವಿಗಳಿದ್ದಲ್ಲಿ ಫಲಾನುಭವಿಗಳ ಹೆಸರು ಸಮೇತ ವಿಳಾಸದೊಂದಿಗೆ ಮಾಹಿತಿ ಒದಗಿಸುವುದು)
ಆ) 201819 ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ; (ಕಾಮಗಾರಿ ಹೆಸರು ಗುತ್ತಿಗೆದಾರರ ಹೆಸರು ಸಮೇತ ಸಂಪೂರ್ಣ ವಿವರ ನೀಡುವುದು)
ಇ) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರಕ್ಕೆ ನೀಡಿರುವ ಅನುದಾನ

ಬಹಳ ಕಡಿಮೆಯಾಗಿದ್ದು, ಬೇರೆ ವಿಧಾನಸಭಾ ಕ್ಷೇತ್ರಗಳಿಗೆ ಹೋಲಿಸಿದ್ದಲ್ಲಿ, ನೀಡುತ್ತಿರುವ ಅನುದಾನದಲ್ಲಿ ತಾರತಮ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಕೈಗೊಂಡಕ್ರಮವೇನು?

----

15/4/712

**ಅಭಿವೃದ್ಧಿ ಕಾಮಗಾರಿಗಳು**

**837 ಅಮೀನಪ್ಪ ಗೌಡ ಎಸ್ ಪಾಟೀಲ್ (ನಡಹಳ್ಳಿ) (ಮುದ್ದೇಬಿಹಾಳ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದಲ್ಲಿ ಕೃಷಿ ಇಲಾಖೆಯಿಂದ 201819 ಹಾಗೂ 201920 ನೇ ಜೂನ್ ಅಂತ್ಯದ ವರೆಗೆ (ಎಸ್. ಸಿ. ಪಿ ಮತ್ತು ಟಿ. ಎಸ್. ಪಿ ಸೇರಿ) ಸಾಮಾನ್ಯ ವಿಶೇಷ ಇತ್ಯಾದಿ ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಎಷ್ಟು ಅನುದಾನ ಮಂಜೂರಾತಿ ದೊರೆತಿದೆ; (ಅಂಕಿ ಅಂಶ ಸಮೇತ ಕಾಮಗಾರಿ ಹೆಸರಿನೊಂದಿಗೆ ನೀಡಿರುವ ಅನುದಾನದ ಬಗ್ಗೆ ಹಾಗೂ ಪ್ರಯೋಜನ ಪಡೆದವರಲ್ಲಿ ವೈಯಕ್ತಿಕ ಫಲಾನುಭವಿಗಳಿದ್ದಲ್ಲಿ ಫಲಾನುಭವಿಗಳ ಹೆಸರು ಸಮೇತ ವಿಳಾಸದೊಂದಿಗೆ ಮಾಹಿತಿ ಒದಗಿಸುವುದು)

ಆ) 201819 ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ; (ಕಾಮಗಾರಿ ಹೆಸರು ಗುತ್ತಿಗೆದಾರರ ಹೆಸರು ಸಮೇತ ಸಂಪೂರ್ಣ ವಿವರ ನೀಡುವುದು)

----

15/4/713

**ಕೃಷಿ ಮಾರುಕಟ್ಟೆ ಆಸ್ತಿ**

**838 ಅಮೀನಪ್ಪ ಗೌಡ ಎಸ್ ಪಾಟೀಲ್ (ನಡಹಳ್ಳಿ) (ಮುದ್ದೇಬಿಹಾಳ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ತಾಳಿಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಹಾಗೂ ಮುದ್ದೇಬಿಹಾಳ, ನಾಲತವಾಡ ಉಪಮಾರುಕಟ್ಟೆಗಳನ್ನು ಯಾವಾಗ ಪ್ರಾರಂಭಿಸಲಾಯಿತು; (ವಿವರ ನೀಡುವುದು)

ಆ) ಸದರಿ ಮಾರುಕಟ್ಟೆ ಮತ್ತು ಉಪಮಾರುಕಟ್ಟೆಗಳ ಒಟ್ಟು ಚಿರಾಸ್ತಿಗಳೆಷ್ಟು; ಇದರಲ್ಲಿ ಎಷ್ಟು ಮಳಿಗೆ, ನಿವೇಶನ, ಕಛೇರಿ ಕಟ್ಟಡ ಹಾಗೂ ರೈತಭವನಗಳು ಇವೆ; (ಸಂಪೂರ್ಣ ಮಾಹಿತಿ ಒದಗಿಸುವುದು)

ಇ) ಕಳೆದ 3 ವರ್ಷಗಳಲ್ಲಿ ಸದರಿ ಮಾರುಕಟ್ಟೆ ಹಾಗೂ ಉಪಮಾರುಕಟ್ಟೆಗಳಲ್ಲಿ ಎಷ್ಟು ಮಳಿಗೆಗಳು, ನಿವೇಶನಗಳನ್ನು ಲೀಜ್ಕಂಸೇಲ್ ಭೋಗ್ಯ ಮತ್ತು ಮಾರಾಟದ ಆಧಾರದ ಮೇಲೆ ಹಂಚಿಕೆ ಮಾಡಲಾಗಿದೆ;

ಈ) ನಿವೇಶನ/ಮಳಿಗೆ ಅಳತೆ ಮತ್ತು ಪೇಟೆ ಕಾರ್ಯಕರ್ತರ ಹೆಸರು ಅವರಿಗೆ ನೀಡುವ ನಿವೇಶನ/ಮಳಿಗೆಗಳ ಮೌಲ್ಯವೆಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು)

ಉ) ಮಳಿಗೆ/ನಿವೇಶನ ಹಂಚಿಕೆ ಸಮಯದಲ್ಲಿ ಇಲಾಖೆ ಮಾನದಂಡಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆಯೇ; ತೆಗೆದುಕೊಂಡಿದ್ದಂ,ಫಿ ಹಂಚಿಕೆಗೆ ನೀಡಿರುವ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು)

----

15/4/714

**ಉಪಮಾರುಕಟ್ಟೆ ನಿವೇಶನಗಳು**

839 **ಅಮೀನಪ್ಪ ಗೌಡ ಎಸ್ ಪಾಟೀಲ್ (ನಡಹಳ್ಳಿ) (ಮುದ್ದೇಬಿಹಾಳ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ತಾಳಿಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಅಧೀನದಲ್ಲಿ ಬರುವ ಮುದ್ದೇಬಿಹಾಳ ಉಪಮಾರುಕಟ್ಟೆ ವ್ಯಾಪ್ತಿಯ ಸರ್ವೆ ನಂ98 ರಲ್ಲಿ ರಚಿಸಲಾಗಿರುವ ವಿವಿಧ ಅಳತೆಯ ನಿವೇಶನಗಳನ್ನು ಭೋಗ್ಯದ ಮತ್ತು ಮಾರಾಟದ ಆಧಾರದ ಮೇಲೆ ನೀಡಿರುವ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ;
ಆ) ಸದರಿ ಸರ್ವೆ ನಂ. ನಲ್ಲಿ ಎಷ್ಟು ಅಳತೆಯ ಎಷ್ಟು ನಿವೇಶನಗಳಿವೆ; ಇದಕ್ಕೆ ಅರ್ಜಿ ಸಲ್ಲಿಸಿರುವ ಅರ್ಹ ಪೇಟೆ ಕಾರ್ಯಕರ್ತರೆಷ್ಟು; ( ಹೆಸರು ಸಮೇತ ಸಂಪೂರ್ಣ ವಿವರ ನೀಡುವುದು)
ಇ) ಸದರಿ ನಿವೇಶನಗಳ ಹಂಚಿಕೆಗೆ ಅರ್ಹ ಪೇಟೆ ಕಾರ್ಯಕರ್ತರ ಜೇಷ್ಠತಾ ಅಂತಿಮ ಪಟ್ಟಿ ಪ್ರಕಟಿಸಲಾಗಿದೆಯೇ; ಪ್ರಕಟಿಸಿದ್ದಲ್ಲಿ, ಅವರುಗಳ ಹೆಸರು ಜೊತೆ ಅಂತಿಮ ಪಟ್ಟಿ ಪ್ರಕಟಿಸಲು ವಿಳಂಬ ನೀತಿಗೆ ಕಾರಣವೇನು; (ವಿವರ ಒದಗಿಸುವುದು)
ಈ) ಅಂತಿಮ ಪಟ್ಟಿ ಪ್ರಕಟಗೊಂಡ ನಂತರ ಸದರಿ ಅರ್ಹ ಪೇಟೆ ಕಾರ್ಯಕರ್ತರಿಗೆ ಭೋಗ್ಯ ಮತ್ತು ಮಾರಾಟ ಆಧಾರದ ಮೇಲೆ ನಿವೇಶನ ನೀಡಲು ಯಾವ ಕ್ರಮ ಕೈಗೊಳ್ಳಲಾಗುತ್ತಿದೆ; (ವಿವರ ಒದಗಿಸುವುದು)
ಉ) ಲೀಸ್‌ಕಂಸೇಲ್ ಆಧಾರದ ಮೇಲೆ ಸಮಿತಿಯವರು ಅರ್ಹ ವ್ಯಕ್ತಿಗಳಿಗೆ ನೊಂದಣಿ ಮಾಡಲು ವಿಳಂಬಧೋರಣೆ ಅನುಸರಿಸುತ್ತಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ;
ಊ) ಬಂದಿದ್ದಲ್ಲಿ, ಅರ್ಹರಿಗೆ ಯಾವಾಗ ನೊಂದಣಿ ಮಾಡಿಕೊಡಲಾಗುವುದು?

----

15/4/698

**ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ**

840 **ಪ್ರಭು ಬಿ ಚೌವ್ಹಾಣ (ಔರಾದ್):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೀದರ್ ಜಿಲ್ಲೆ ಔರಾದ್ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ಎಷ್ಟು ರೈತರಿಗೆ ವಿಮೆ ಅನುದಾನ ಸಂದಾಯವಾಗಿದೆ; (ವಿವರ ನೀಡುವುದು)
ಆ) ಇನ್ನೂ ಎಷ್ಟು ರೈತರಿಗೆ ವಿಮೆ ಹಣ ಬರಬೇಕಾಗಿದೆ? (ವಿವರ ನೀಡುವುದು)

----

15/4/699

**ಕೃಷಿ ಸಂಚಾಯಿ ಯೋಜನೆ**

841 **ಪ್ರಭು ಬಿ ಚೌವ್ಹಾಣ (ಔರಾದ್):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಔರಾದ್ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಈವರೆವಿಗೆ ಕೃಷಿ ಸಂಚಾಯಿ ಯೋಜನೆಯಡಿಯಲ್ಲಿ ಎಷ್ಟು ರೈತರುಗಳಿಗೆ ಸೌಲಭ್ಯ ಒದಗಿಸಲಾಗಿದೆ; (ವಿವರ ನೀಡುವುದು)
ಆ) ಸದರಿ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳೆಷ್ಟು ಹಾಗೂ ಇದಕ್ಕಾಗಿ ಸರ್ಕಾರ ಖರ್ಚು ಮಾಡಿರುವ ಅನುದಾನವೆಷ್ಟು? (ವಿವರ ನೀಡುವುದು)

----

15/4/700

## ಮಣ್ಣು ಪರೀಕ್ಷೆ

**842 ಪ್ರಭು ಬಿ ಚೌವ್ಹಾಣ (ಔರಾದ್):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೀದರ್ ಜಿಲ್ಲೆ ಔರಾದ್ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಈವರೆವಿಗೆ ಎಷ್ಟು ರೈತರ ಜಮೀನುಗಳ ಮಣ್ಣು ಪರೀಕ್ಷೆ ನಡೆಸಲಾಗಿದೆ; ಇದರ ಫಲಿತಾಂಶಗಳೇನು;
ಆ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ರೈತರಿಗೆ ಮಣ್ಣು ಪರೀಕ್ಷೆ ಆರೋಗ್ಯ ಕಾರ್ಡ್‍ಗಳನ್ನು ವಿತರಿಸಲಾಗಿದೆ; (ವಿವರ ನೀಡುವುದು)
ಇ) ಇನ್ನು ಎಷ್ಟು ರೈತರಿಗೆ ಮಣ್ಣು ಪರೀಕ್ಷೆ ಆರೋಗ್ಯ ಕಾರ್ಡ್‍ಗಳನ್ನು ವಿತರಿಸಬೇಕಾಗಿದೆ; ಯಾವ ಕಾಲಮಿತಿಯೊಳಗಾಗಿ ಸದರಿ ಕಾರ್ಡ್‍ಗಳನ್ನು ವಿತರಿಸಲಾಗುವುದು;
ಈ) ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)

----

15/4/701

## ರೈತರ ಸಾಲ ಮನ್ನಾ

**843 ಪ್ರಭು ಬಿ ಚೌವ್ಹಾಣ (ಔರಾದ್):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರೈತರ ಸಾಲ ಮನ್ನಾ ಯೋಜನೆಯಡಿಯಲ್ಲಿ ಈವರೆವಿಗೂ ರಾಜ್ಯ ವ್ಯಾಪ್ತಿ ಎಷ್ಟು ರೈತರ ಸಾಲ ಮನ್ನಾ ಮಾಡಲಾಗಿದೆ; (ವಿವರ ನೀಡುವುದು)
ಆ) ಈ ಪೈಕಿ ಸರ್ಕಾರ ಸದರಿ ಯೋಜನೆಗೆ ನಿಗಧಿಪಡಿಸಿರುವ ಅನುದಾನ ಹಾಗೂ ಈವರೆವಿಗೂ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಬಿಡುಗಡೆ ಮಾಡಿರುವ ಅನುದಾನದ ಜಿಲ್ಲಾವಾರು ವಿವರ ನೀಡುವುದು)
ಇ) ಬೀದರ್ ಜಿಲ್ಲೆಗೆ ಅನುದಾನ ಬಿಡುಗಡೆ ಮಾಡಿ ರೈತರ ಸಾಲ ಮನ್ನಾಕ್ಕೆ ತೊಡಗಿಸಿರುವ ಅನುದಾನವೆಷ್ಟು;
ಈ) ಬೀದರ್ ಜಿಲ್ಲೆಯಲ್ಲಿ ಎಷ್ಟು ರೈತರ ಸಾಲ ಮನ್ನಾ ಬಾಕಿ ಇದೆ; ಈ ರೈತರುಗಳ ಸಾಲ ಮಾನ್ನಾ ಬಾಕಿ ಇರಲು ಕಾರಣಗಳೇನು? (ತಾಲ್ಲೂಕುವಾರು ಸಾಲ ಮನ್ನಾ ಫಲಾನುಭವಿಗಳ ವಿವರ ನೀಡುವುದು)

----

15/4/1066

## ಹೂವಿನ ಮಾರುಕಟ್ಟೆ

**844 ಟಿ ರಘುಮೂರ್ತಿ (ಚಳ್ಳಕೆರೆ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ನಗರಕ್ಕೆ ಹೂವಿನ ಮಾರಾಟ ಮಾಡಲು ಬರುವ ಗ್ರಾಮೀಣ ಭಾಗದ ರೈತರಿಗೆ ಸೂಕ್ತ ಮಾರುಕಟ್ಟೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಬರಗಾಲ ಪೀಡಿತ ಚಳ್ಳಕೆರೆ ಗ್ರಾಮೀಣ ಭಾಗದ ರೈತರು ಬೆಳೆದ ಹೂವುಗಳನ್ನು ಮಾರಲು ಸರ್ಕಾರವು ಯಾವಾಗ ಚಳ್ಳಕೆರೆ ನಗರದಲ್ಲಿ ಹೂವಿನ ಮಾರುಕಟ್ಟೆಯನ್ನು ಪ್ರಾರಂಭ ಮಾಡಲಾಗುವುದು

(ವಿವರ ನೀಡುವುದು)?

----

15/4/704

**ಸಾಲ ಮನ್ನಾ ಯೋಜನೆ**

845 **ರಾಜ್‌ಕುಮಾರ್ ಪಾಟೀಲ್ (ಸೇಡಂ ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 2018-19 ಹಾಗೂ 2019-20ನೇ ಸಾಲುಗಳಲ್ಲಿ ಸೇಡಂ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸಾಲ ಮನ್ನಾಕ್ಕಾಗಿ ಎಷ್ಟು ರೈತರನ್ನು ಗುರುತಿಸಲಾಗಿದೆ; (ರಾಷ್ಟ್ರೀಕೃತ ಬ್ಯಾಂಕ್, ಸಹಕಾರಿ ಬ್ಯಾಂಕ್‌ಗಳವಾರು ಅರ್ಹ ರೈತರ ಪಟ್ಟಿಯನ್ನು ಒದಗಿಸುವುದು)
ಆ) ಇಲ್ಲಿಯವರೆಗೆ ಎಷ್ಟು ರೈತರಿಗೆ ಋಣಮುಕ್ತ ಪ್ರಮಾಣ ಪತ್ರವನ್ನು ನೀಡಲಾಗಿದೆ;
ಇ) ಋಣಮುಕ್ತ ಹೊಂದಿದ ರೈತರನ್ನು ಹೊರತುಪಡಿಸಿ ಇನ್ನುಳಿದ ರೈತರಿಗೆ ಯಾವ ಕಾಲಮಿತಿಯೊಳಗೆ ಸರ್ಕಾರವು ಋಣಮುಕ್ತ ಪ್ರಮಾಣ ಪತ್ರ ನೀಡಲಾಗುವುದು?

----

15/4/36

**ಅರಣ್ಯ ಹಕ್ಕು ಕಾಯ್ದೆ ಹಾಗೂ ಅರಣ್ಯ ಹಕ್ಕು ಸಮಿತಿಗಳು**

846 **ಎಸ್. ಎ. ರಾಮದಾಸ್ (ಕೃಷ್ಣರಾಜ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಬುಡಕಟ್ಟು ಜನಾಂಗದವರ ಎಷ್ಟು ಕುಟುಂಬಗಳಿಗೆ 2008ರ ಅರಣ್ಯ ಹಕ್ಕು ಕಾಯ್ದೆ ಅಧಿನಿಯಮದಡಿ ವೈಯಕ್ತಿಕ ಹಕ್ಕನ್ನು ನೀಡಲಾಗಿದೆ; (ಜಿಲ್ಲೆ ಹಾಗೂ ತಾಲ್ಲೂಕುವಾರು ಕಾರ್ಯಪ್ರಗತಿ ವಿವರ ನೀಡುವುದು)
ಆ) ವೈಯಕ್ತಿಕ ಹಕ್ಕಿನಡಿ ಮಂಜೂರಾಗಿರುವ ವ್ಯವಸಾಯ ಜಮೀನುಗಳಿಗೆ ಆರ್.ಟಿ.ಸಿ ನೀಡಲಾಗಿದೆಯೇ; ಈ ನಿಟ್ಟಿನಲ್ಲಿ ಆಗಿರುವ ಕಾರ್ಯ ಪ್ರಗತಿ ಏನು; ಇದಕ್ಕೆ ಪೂರಕವಾಗಿ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿಯಾಗಿ ಹಮ್ಮಿಕೊಂಡಿರುವ ಕಾಲಮಿತಿ ಕಾರ್ಯ ಯೋಜನೆಗಳೇನು;
ಇ) ಸದರಿ ಕಾಯ್ದೆ ಅಡಿಯಲ್ಲಿ ಸಮುದಾಯಿಕ ಹಕ್ಕಿನಡಿಯಲ್ಲಿ ಅರಣ್ಯ ಇಲಾಖೆ ಮತ್ತು ಸಮುದಾಯದ ನಡುವೆ "ಸಹ ನಿರ್ವಹಣೆ ಯೋಜನೆ" (Community Plan) ಸಿದ್ದಪಡಿಸಿ ಅನುಮೋದನೆ ನೀಡಲಾಗಿದೆಯೇ; ಈ ನಿಟ್ಟಿನಲ್ಲಿ ಇಲಾಖೆ ಕೈಗೊಂಡಿರುವ ಕಾರ್ಯಕ್ರಮಗಳಾವುವು;
ಈ) ಅರಣ್ಯ ಹಕ್ಕು ಸಮಿತಿಗಳ ರಚನೆಯ ನಂತರ ಲ್ಯಾಪ್ ಸೊಸೈಟಿಗಳ ಕಾರ್ಯ ನಿರ್ವಹಣೆ ಅಗತ್ಯವಿದೆಯೇ; ಲ್ಯಾಪ್ ಸೊಸೈಟಿಗಳಿಗೆ ಅಧ್ಯಕ್ಷರಾಗಿ ಅರಣ್ಯ ಇಲಾಖೆಯ ಅಧಿಕಾರಿಗಳೇ ಮುಂದುವರಿಯುತ್ತಿರುವುದಕ್ಕೆ ಕಾರಣವೇನು; ಅರಣ್ಯ ಹಕ್ಕು ಸಮಿತಿಗಳು ತಳಹಂತದಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಸದರಿ ಸೊಸೈಟಿಗಳ ಕಾರ್ಯ ನಿರ್ವಹಣೆ ಅಗತ್ಯವಿದೆಯೇ;
ಉ) 2018-19 ಮತ್ತು 2019-20ನೇ ಸಾಲಿಗೆ Non timber forest producers ಸಂಗ್ರಹಿಸಲು ಎಷ್ಟು ಮಂದಿಗೆ ಗುರುತಿನ ಚೀಟಿಯನ್ನು ವಿತರಿಸಲಾಗಿದೆ; ಅರಣ್ಯ ಹಕ್ಕು ಸಮಿತಿಗಳಿಗೆ ಅವರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ತರಬೇತಿಗಳನ್ನು ನೀಡಲಾಗುತ್ತಿದೆಯೇ; ಈ ಕಾರ್ಯವನ್ನು ಪೂರ್ಣಗೊಳಿಸಲು ಕಾರ್ಯ ಯೋಜನೆ ನಿಗದಿಗೊಳಿಸಲಾಗಿದೆಯೇ? (ಯಾವಾಗ ಪೂರ್ಣಗೊಳಿಸಲಾಗುವುದು)

----

15/4/37

**ವಿವಿಧ ಕೃಷಿ ಯೋಜನೆಗಳು**

**847** **ಎಸ್. ಎ. ರಾಮದಾಸ್ (ಕೃಷ್ಣರಾಜ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿಯಲ್ಲಿ ರಾಜ್ಯದ ರೈತರಿಗೆ ಯಾವ ಸೌಲಭ್ಯಗಳು ದೊರೆಯುತ್ತದೆ; ಕಳೆದ ಮೂರು ವರ್ಷಗಳಿಂದ ಎಷ್ಟು ರೈತರು ಇದರ ಪ್ರಯೋಜನ ಪಡೆದಿರುತ್ತಾರೆ; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) 2019-20ನೇ ಸಾಲಿನ ಕೃಷಿ ಭಾಗ್ಯ ಯೋಜನೆಗೆ ಗುರುತಿಸಿರುವ ರೈತರ ಸಂಖ್ಯೆ ಎಷ್ಟು;

ಇ) ಫಸಲ್ ಭೀಮಾ ಯೋಜನೆ ಅಡಿ 2018-19ನೇ ಸಾಲಿನಲ್ಲಿ ರಾಜ್ಯದ ರೈತರಿಗೆ ದೊರೆತಿರುವ ಪರಿಹಾರ ಮೊತ್ತವೆಷ್ಟು ಹಾಗೂ ರೈತರ ಸಂಖ್ಯೆ ಎಷ್ಟು;

ಈ) 2019-20ನೇ ಸಾಲಿನ ಬೆಳೆ ವಿಮೆ ಪರಿಣಾಮಕಾರಿಯಾಗಿ ಮಾಡಲು ಇಲಾಖೆ ಕೈಗೊಂಡಿರುವ ಕ್ರಮಗಳಾವುವು; ರೈತರಿಗೆ ಈ ನಿಟ್ಟಿನಲ್ಲಿ ಮಾಹಿತಿ, ಶಿಕ್ಷಣ, ಸಂಪರ್ಕ ಕಾರ್ಯಕ್ರಮಗಳು ಪ್ರಾರಂಭವಾಗಿದೆಯೇ; ಈ ಸಾಲಿನಲ್ಲಿ ರೈತರನ್ನು ನೊಂದಾಯಿಸುವ ಗುರಿ ಹೊಂದಲಾಗಿದೆಯೇ; ಇವರೆಗೂ ಆಗಿರುವ ಪ್ರಗತಿ ಕಾರ್ಯವೇನು?

----

15/4/142

**ಸಾಲ ಮನ್ನಾ**

**848** **ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) 2018-19ನೇ ಸಾಲಿನ ಆಯವ್ಯಯದಲ್ಲಿ ರೈತರ ರೂ.1 ಲಕ್ಷದವರೆಗಿನ ಸಾಲ ಮನ್ನಾ ಮಾಡುವುದಾಗಿ ಘೋಷಿಸಿರುವುದು ನಿಜವೇ; ಸಾಲ ಮನ್ನಾ ಮಾಡಲು ಸರ್ಕಾರ ವಿಧಿಸಿರುವ ಷರತ್ತುಗಳಾವುವು;

ಆ) ದಿನಾಂಕ:10.07.2018ರ ಅಂತ್ಯಕ್ಕೆ ಸುಸ್ತಿಯಾಗಿರುವ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತವೆಷ್ಟು (ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕು ಸೇರಿಸಿ ಮಾಹಿತಿಯನ್ನು ಒದಗಿಸುವುದು);

ಇ) ಈ ಪೈಕಿ ಸುಸ್ತಿಯಾದ ಪ್ರಕರಣಗಳಲ್ಲಿ ರೈತರಿಗೆ ಸಾಲ ಮನ್ನಾ ಆಗಿರುವ ಮೊತ್ತವೆಷ್ಟು ಹಾಗೂ ಚಾಲ್ತಿ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತವೆಷ್ಟು; (ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕು ಸೇರಿಸಿ ಮಾಹಿತಿಯನ್ನು ಒದಗಿಸುವುದು);

ಈ) ಸಾಲ ಮನ್ನಾ ಆಗದಿರುವ ಪ್ರಕರಣಗಳ ಬಗ್ಗೆ ಸರ್ಕಾರದ ನಿರ್ಧಾರವೇನು?

----

15/4/1308

**ಹೋಮ್ ಸ್ಟೇ ಹಾಗೂ ರೆಸಾರ್ಟ್‌ಗಳ ಬಗ್ಗೆ**

**849** **ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಚಿಕ್ಕಮಗಳೂರು ಜಿಲ್ಲೆ ಹಾಗೂ ಮಲೆನಾಡು ಭಾಗದಲ್ಲಿ ನೂರಾರು ಸಂಖ್ಯೆಯಲ್ಲಿ ಹೋಮ್ ಸ್ಟೇ ಹಾಗೂ ರೆಸಾರ್ಟ್‌ಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಹೋಮ್ ಸ್ಟೇ ಹಾಗೂ ರೆಸಾರ್ಟ್‌ಗಳಿಂದ ಉತ್ಪಾದನೆಯಾಗುತ್ತಿರುವ ಘನ ಹಾಗೂ ದ್ರವ ತ್ಯಾಜ್ಯಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡದೇ ಇರುವುದರಿಂದ ಗಿರಿ ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಕಸ ಸಂಗ್ರಹವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮವಹಿಸಿದೆ? (ವಿವರ ಒದಗಿಸುವುದು)

----

15/4/1309

**ರೆಸಾರ್ಟ್ ಹೋಮ್ ಸ್ಟೇಗಳಿಗೆ ಅನುಮತಿ**

**850 ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ರೆಸಾರ್ಟ್ ಹಾಗೂ ಹೋಮ್ ಸ್ಟೇಗಳಿಗೆ ಅನುಮತಿ ನೀಡಲು ಅನುಸರಿಸಬೇಕಾದ ಮಾನದಂಡಗಳೇನು; (ಈ ಸಂಬಂಧ ಹೊರಡಿಸಿರುವ ಸರ್ಕಾರಿ ಆದೇಶ ಅಥವಾ ಸುತ್ತೋಲೆ ವಿವರ ನೀಡುವುದು)

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ರೆಸಾರ್ಟ್ ಮತ್ತು ಹೋಮ್ ಸ್ಟೇಗಳ ಸಂಖ್ಯೆ ಎಷ್ಟು ಮತ್ತು ಯಾವುವು; (ತಾಲ್ಲೂಕುವಾರು ವಿವರ ಒದಗಿಸುವುದು)

ಇ) ಈ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿಯಾಗಿರುವ ಹಾಗೂ ನೋಂದಣಿಯಾಗದೆ ಇರುವ ಹೋಮ್ ಸ್ಟೇ ಹಾಗೂ ರೆಸಾರ್ಟ್‌ಗಳು ಎಷ್ಟು ಹಾಗೂ ಯಾವುವು; (ತಾಲ್ಲೂಕುವಾರು ವಿವರ ಒದಗಿಸುವುದು)

ಈ) ಜಿಲ್ಲೆಯಲ್ಲಿ ಅಕ್ರಮವಾಗಿ ತಲೆಯೆತ್ತುತ್ತಿರುವ ರೆಸಾರ್ಟ್ ಮತ್ತು ಹೋಮ್ ಸ್ಟೇಗಳನ್ನು ನಿಯಂತ್ರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ಒದಗಿಸುವುದು)

----

15/4/1310

**ಅನುದಾನ ಬಿಡುಗಡೆ**

**851 ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಪ್ರವಾಸೋದ್ಯಮ ಇಲಾಖೆಯಿಂದ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಬಿಡುಗಡೆಯಾಗಿರುವ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ; (ವಿವರ ಒದಗಿಸುವುದು)

ಇ) ಚಿಕ್ಕಮಗಳೂರು ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಕೆಯಾಗಿವೆಯೇ; ಹಾಗೂ ಈ ಪ್ರಸ್ತಾವನೆಗಳಿಗೆ ಯಾವಾಗ ಮಂಜೂರಾತಿ ಮಾಡಲಾಗುವುದು? (ವಿವರ ಒದಗಿಸುವುದು)

----

15/4/1325

**ಪಾರಂಪರಿಕ ಕಟ್ಟಡ**

852 **ರವಿಸುಬ್ರಮಣ್ಯ ಎಲ್.ಎ. (ಬಸವನಗುಡಿ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಪಾರಂಪರಿಕ ಕಟ್ಟಡವೆಂದು ಯಾವ ಮಾನದಂಡಗಳನ್ವಯ ಘೋಷಿಸಲಾಗುತ್ತದೆ ರಾಜ್ಯದಲ್ಲಿ ಎಷ್ಟು ಪಾರಂಪರಿಕ ಕಟ್ಟಡಗಳನ್ನು ಸರ್ಕಾರದ ಘೋಷಣೆ ಮಾಡಿದೆ. (ಜಿಲ್ಲಾವಾರು ವಿವರ ನೀಡುವುದು)

ಆ) ಮೈಸೂರು ಮಾಹಾರಾಜರ ಕಾಲದಲ್ಲಿ ನಿರ್ಮಾಣಗೊಂಡಿರುವ ಕಟ್ಟಡಗಳನ್ನು ಪಾರಂಪರಿಕ ಕಟ್ಟಡವೆಂದು ಘೋಷಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದಲ್ಲಿ, ಕಳೆದ ಒಂದು ವರ್ಷದಿಂದ ಪ್ರಸ್ತಾವನೆ ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಇದರ ವಿಳಂಬಕ್ಕೆ ಕಾರಣವೇನು?

----

15/4/708

**ವಸತಿ ನಿಲಯಗಳು**

853 **ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ವಸತಿ ನಿಲಯಗಳೆಷ್ಟು; (ಬಾಲಕ/ ಬಾಲಕಿಯರ ಪ್ರತ್ಯೇಕ ವಿವರದೊಂದಿಗೆ ಮಾಹಿತಿ ನೀಡುವುದು)

ಆ) ಸದರಿ ಇಲಾಖಾ ವತಿಯಿಂದ ಎಷ್ಟು ವಸತಿ ಶಾಲೆಗಳು/ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ; (ತಾಲ್ಲೂಕು/ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಸದರಿ ಶಾಲೆಗಳಲ್ಲಿ ಶಿಕ್ಷಕರು/ಸಿಬ್ಬಂದಿ ವರ್ಗದ ಕೊರತೆಯಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಸದರಿ ಕೊರತೆ ನೀಗಿಸಲು ಕೈಗೊಂಡಿರುವ ಕ್ರಮವೇನು;

ಉ) ಸಮಾಜ ಕಲ್ಯಾಣ ಇಲಾಖೆಯಿಂದ ಹೊಸದಾಗಿ ವಸತಿ ನಿಲಯ ಹಾಗೂ ವಸತಿ ಶಾಲೆಗಳನ್ನು ತೆರೆಯಲು ಸರ್ಕಾರ ಯೋಚಿಸಿದೆಯೇ; (ವಿವರ ನೀಡುವುದು)

ಊ) ಸಮಾಜ ಕಲ್ಯಾಣ ಇಲಾಖೆಯಿಂದ ಬೇರೆ ಇಲಾಖೆಯ ವಸತಿ ಶಾಲೆಗಳನ್ನು ಬೇರ್ಪಡಿಸುವ ಕಾರ್ಯವು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

----

15/4/726

**ಇಲಾಖೆಯ ಮಾಹಿತಿ**

854 **ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಸಾಲ ಮನ್ನಾ ಯೋಜನೆಗೆ ಸರ್ಕಾರ ರೂಪಿಸಿರುವ ನಿಯಮಗಳೇನು; ಸಾಲಮನ್ನಾಗೆ ವಿಧಿಸಲಾಗುತ್ತಿರುವ

ನಿಬಂಧನೆಗಳಿಂದಾಗಿ ಸಾಲಮನ್ನಾ ಕಗ್ಗಂಟಾಗಿರುವುದು ನಿಜವೇ;
ಆ) ಹಾಗಿದ್ದಲ್ಲಿ,44,000 ಕೋಟಿಯಿಂದ 20,000 ಕೋಟಿಗೆ ಮೊತ್ತ ಇಳಿಯಲು ಕಾರಣವೇನು; ಇದರಲ್ಲಿ ವಾಣಿಜ್ಯ ಬ್ಯಾಂಕ್ ಹಾಗೂ ಸಹಕಾರಿ ವಲಯದ ಸಾಲವೆಷ್ಟು;
ಇ) ಈ ಪ್ರಕ್ರಿಯೆಗೆ ದಾಖಲೆ ಸಲ್ಲಿಸಲು ಅವಧಿ ನಿಗಧಿಪಡಿಸಿದೆಯೇ; ಇವುಗಳ ತಾಳೆ ಹಾಕುವ ಕಾರ್ಯ ವಿಳಂಬ ಹಾಗೂ ಪರಿಶೀಲನೆ ನಡೆದಂತೆ ಸಾಲ ಮನ್ನಾ ಯೋಜನೆ ಸಮರ್ಪಕ ಅನುಷ್ಠಾನ ಸಾಧ್ಯವಿಲ್ಲವೆಂಬ ಸಾರ್ವಜನಿಕರ ಅಭಿಪ್ರಾಯದ ಬಗ್ಗೆ ಸರ್ಕಾರದ ನಿಲುವೇನು;
ಈ) ಪೂರ್ಣ ಸಾಲ ಮನ್ನಾ ಮಾಡಲು ಸರ್ಕಾರ ಮುಂದಾಗುವುದೇ; ಎಷ್ಟು ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು; ಇಲ್ಲದಿದ್ದಲ್ಲಿ ಕಾರಣಗಳೇನು?

----

**15/4/727**

## ರೈತರ ಸಾಲಮನ್ನಾ ಯೋಜನೆ

855 **ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರೈತರು ವಾಣಿಜ್ಯ ಬ್ಯಾಂಕ್‌ಗಳು ಮತ್ತು ಸಹಕಾರಿ ವಲಯಗಳ ಬ್ಯಾಂಕ್‌ಗಳಲ್ಲಿ ಮಾಡಿರುವ ಸಾಲವನ್ನು ಮನ್ನಾ ಮಾಡುವ ಯೋಜನೆಯನ್ನು ಸರ್ಕಾರವು ಘೋಷಿಸಿದೆಯೇ;ಇದ್ದಲ್ಲಿ 2019ರ ಜನವರಿ 30ರ ವರೆಗೆ ಸಾಲ ಮನ್ನಾ ಮಾಡಲು ವಿನಿಯೋಗಿಸಿರುವ ಮೊತ್ತವೆಷ್ಟು; ಇದರಲ್ಲಿ, ವಾಣಿಜ್ಯ ಬ್ಯಾಂಕ್ ಮತ್ತು ಸಹಕಾರಿ ವಲಯಗಳ ಬ್ಯಾಂಕುಗಳಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು;(ಪ್ರತಿಯೊಂದು ಬ್ಯಾಂಕುಗಳ ವಿವರಗಳನ್ನು ಒದಗಿಸುವುದು)
ಆ) ಇಲ್ಲಿಯವರೆಗೆ ಸಾಲ ಮಾಡಿರುವ ರೈತರ ಸಂಖ್ಯೆ ಮತ್ತು ಅವರುಗಳು ಮಾಡಿರುವ ಸಾಲದ ಮೊತ್ತವೆಷ್ಟು;( ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)
ಇ) ಸಾಲ ಮನ್ನಾ ಮಾಡಲು ಬೇಕಾಗಿರುವ ಒಟ್ಟು ಮೊತ್ತವೆಷ್ಟು;ಇದರಲ್ಲಿ ಪ್ರಸ್ತುತ ಬಿಡುಗಡೆ ಮಾಡಿರುವ ಸಾಲದ ಮೊತ್ತವೆಷ್ಟು;
ಈ) ಸಾಲ ಮನ್ನಾ ಯೋಜನೆಯಡಿಯಲ್ಲಿ 2019ರ ಜನವರಿ 30ರ ವರೆಗೆ ಎಷ್ಟು ಜನ ರೈತರ ಸಾಲ ಮನ್ನಾ ಮಡಲಾಗಿದೆ;( ಜಿಲ್ಲಾವಾರು ರೈತರ ಮತ್ತು ಸಾಲದ ಮೊತ್ತಗಳ ವಿವರ ಒದಗಿಸುವುದು)
ಉ) ಸಾಲ ಮನ್ನಾ ಮಾಡಲು ವಿನಿಯೋಗಿಸಿರುವ ಅನುದಾನವನ್ನು ಯಾವ ಯಾವ ಮೂಲಗಳಿಂದಭರಿಸಲಾಗಿದೆ; ಸಾಲ ಮನ್ನಾ ಯೋಜನೆಗಾಗಿ ಬೇರೆ ಬೇರೆ ಯೋಜನೆಗಳಿಗೆ ಮೀಸಲಿರಿಸಿದ ಅನುದಾನವನ್ನೇನಾದರು ಕಡಿತಗೊಳಿಸಲಾಗಿದೆಯೇ; ಇದ್ದಲ್ಲಿ ಯಾವ್ಯಾವ ಇಲಾಖೆಯ ಯೋಜನೆಗಳಲ್ಲಿ ಎಷ್ಟೆಷ್ಟು ಅನುದಾನವನ್ನು ಕಡಿತಗೊಳಿಸಲಾಗಿದೆ?( ವಿವರ ಒದಗಿಸುವುದು)

----

**15/4/728**

## ವಾಣಿಜ್ಯ ಹಾಗೂ ಸಹಕಾರ ಬ್ಯಾಂಕುಗಳಲ್ಲಿ ಸಾಲಮನ್ನಾಕ್ಕೆ ಹಣ ಬಿಡುಗಡೆ

856 **ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರೈತರ ಬೆಳೆ ಸಾಲ ಮನ್ನಾ ಯೋಜನೆಯಡಿ ಇದುವರೆಗೂ ವಾಣಿಜ್ಯ ಬ್ಯಾಂಕ್ ಮತ್ತು ಸಹಕಾರ ಬ್ಯಾಂಕಗಳ

ಖಾತೆಗಳಿಗೆ ಬಿಡುಗಡೆಯಾಗಿರುವ ಮೊತ್ತವೆಷ್ಟು;

ಆ) ಇದರಲ್ಲಿ, ವಾಣಿಜ್ಯ ಬ್ಯಾಂಕ್‌ಗಳಿಗೆ ಹಾಗೂ ಸಹಕಾರಿ ಬ್ಯಾಂಕ್‌ಗಳಿಗೆ ಬಿಡುಗಡೆಯಾದ ಮೊತ್ತವನ್ನು ರೈತರ ಸಾಲ ಖಾತೆಗಳಿಗೆ ಜಮಾ ಮಾಡಲಾಗಿದೆಯೇ;

ಇ) ಜಮಾ ಮಾಡಲು ಬಾಕಿ ಇರುವ ಸಾಲ ಖಾತೆಗಳೆಷ್ಟು; ಉಳಿದ ಬೆಳೆ ಸಾಲದ ಮೊತ್ತವನ್ನು ಯಾವಾಗ ಸಾಲ ಖಾತೆಗಳಿಗೆ ಬಿಡುಗಡೆ ಮಾಡಲಾಗುತ್ತದೆ; ಇದಕ್ಕೆ ಅನುಸರಿಸುವ ಮಾನದಂಡಗಳೇನು;

ಈ) ಬಿಡುಗಡೆಯಾದ ಮೊತ್ತವನ್ನು ಸಮರ್ಪಕವಾಗಿ ಬ್ಯಾಂಕ್‌ಗಳು ಜಮಾ ಮಾಡದಿರುವ ಪ್ರಕರಣಗಳು ಬೆಳಕಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇವುಗಳ ಬಗ್ಗೆ ಸರ್ಕಾರದ ಕ್ರಮವೇನು?

----

15/4/729

## ರೈತರ ಯಂತ್ರೋಪಕರಣಗಳಿಗೆ ಸಕಾಯಧನ

857 **ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) 201819ನೇ ಸಾಲಿನಲ್ಲಿ ಕೃಷಿ ಇಲಾಖೆಯಿಂದ ರೈತರ ಯಂತ್ರೋಪಕರಣಕ್ಕೆ ಸಹಾಯಧನ ನೀಡದಿರುವುದು ಸರ್ಕಾರ|ದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರದ ಕ್ರಮವೇನು;

ಆ) ಹಾಗಿದ್ದಲ್ಲಿ,ಎಷ್ಟು ರೈತರಿಗೆ ಯಂತ್ರೋಪಕರಣಗಳನ್ನು ನೀಡಲಾಗಿದೆ;( ಮಾಹಿತಿ ನೀಡುವುದು)

ಇ) 201718ನೇ ಸಾಲಿನಲ್ಲಿ ಎಷ್ಟು ರೈತರಿಗೆ ಕೃಷಿ ಉಪಕರಣಗಳನ್ನು ನೀಡಲಾಗಿದೆ; ಯಾವ ಯಾವ ಉಪಕರಣಕ್ಕೆ ಎಷ್ಟು ಸಹಾಯ ಧನ ನೀಡಲಾಗಿದೆ ;( ಮಾಹಿತಿ ನೀಡುವುದು)

ಈ) ಯಾವ ಬಗೆಯ ಯಂತ್ರೋಪಕರಣಗಳನ್ನು ಕೃಷಿ ಇಲಾಖೆಯಿಂದ ನೀಡಲಾಗುವುದು;( ವಿವರ ನೀಡುವುದು)

ಉ) ಕೃಷಿ ಇಲಾಖೆಯಿಂದ ರೈತರಿಗೆ ನೆರವಾಗುವ ಯೋಜನೆಗಳಾವುವು;( ಯೋಜನೆಗಳ ಮಾಹಿತಿ ಹಾಗೂ ಹೆಸರುಗಳನ್ನುನೀಡುವುದು)

ಊ) ಯಾವ ಯಾವ ಯೋಜನೆಯಲ್ಲಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು)

----

15/4/1121

## ಸಹಕಾರ ಸಂಘದ ಅವ್ಯವಹಾರ

858 **ಎಸ್ ಎನ್ ನಾರಾಯಣಸ್ವಾಮಿ ಕೆ ಎಂ (ಬಂಗಾರಪೇಟೆ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬಂಗಾರಪೇಟೆ ತಾಲ್ಲೂಕು ಬತ್ತಲಹಳ್ಳಿ ಗ್ರಾಮದ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ 3 ವರ್ಷಗಳಿಂದ ಸದರಿ ಸಹಕಾರ ಸಂಘದಲ್ಲಿ ನೀಡಲಾದ ಸಾಲದ ವಿವರಗಳನ್ನು ರೈತರಿಗೆ ನೀಡಲಾದ ಸಾಲದ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು;

ಇ) ಸದರಿ ಸಂಘದ ಕಾರ್ಯದರ್ಶಿಗಳು ಸಮಯಕ್ಕೆ ಸರಿಯಾಗಿ ಕಛೇರಿಗೆ ಹಾಜರಾಗದೆ ಆಹಾರ ಪಡಿತರಗಳನ್ನು ಸಕಾಲಕ್ಕೆ ವಿತರಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಈ) ಸದರಿ ಸಂಘದ ಆಡಿಟ್ ವರದಿ ಬಂದಿದೆಯೇ; ಬಂದಿದ್ದಲ್ಲಿ, ಆಡಿಟ್ ಆಕ್ಷೇಪಣೆಗಳನ್ನು ಪರಿಶೀಲಿಸಿ ವಸೂಲಾತಿ ಮಾಡಲಾಗಿದೆಯೇ? (ವಿವರಗಳನ್ನು ನೀಡುವುದು);

----

15/4/1122

**ಸಹಕಾರ ಸಂಘದ ಅವ್ಯವಹಾರ**

859 **ಎಸ್ ಎನ್ ನಾರಾಯಣಸ್ವಾಮಿ ಕೆ ಎಂ (ಬಂಗಾರಪೇಟೆ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬಂಗಾರಪೇಟೆ ತಾಲ್ಲೂಕು ಬೋಡೆನಹಳ್ಳಿ ಸಹಕಾರ ಸಂಘದಲ್ಲಿ ಅಧಿಕಾರ ಹಾಗೂ ಹಣ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಸಹಕಾರ ಸಂಘಗಳು ಸಾಲ ಪಡೆದ ರೈತರಿಂದ ಹಣ ವಸೂಲಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಸಹಕಾರ ಸಂಘದಲ್ಲಿ ಆಹಾರ ಧಾನ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಸರಿಯಾಗಿ ವಿತರಿಸದೆ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿರುವ ದೂರುಗಳು ಬಂದಿದ್ದು, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

----

15/4/1123

**ಸಹಕಾರ ಸಂಘದ ಅವ್ಯವಹಾರ**

860 **ಎಸ್ ಎನ್ ನಾರಾಯಣಸ್ವಾಮಿ ಕೆ ಎಂ (ಬಂಗಾರಪೇಟೆ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ 3 ವರ್ಷಗಳಿಂದ ಕೋಲಾರ ಜಿಲ್ಲಾ ಸಹಕಾರಿ ಸಂಘಗಳ ಬ್ಯಾಂಕ್‌ನಲ್ಲಿ ವಿವಿಧ ಕ್ಷೇತ್ರಗಳಿಗೆ ನೀಡಲಾದ ಸಾಲದ ಮೊತ್ತವೆಷ್ಟು; ಯಾವ ಯಾವ ಉದ್ದೇಶಗಳಿಗಾಗಿ ಸಾಲ ನೀಡಲಾಗಿದೆ, ನೀಡಲಾದ ಸಾಲದ ಮೊತ್ತ ಎಷ್ಟು;
ಆ) ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡಲಾದ ಸಾಲದ ಮೊತ್ತವೆಷ್ಟು? (ವಿವರಗಳನ್ನು ತಾಲ್ಲೂಕುವಾರು ಹಾಗೂ ಸಂಘಗಳ ಮಾಹಿತಿಯನ್ನು ಒದಗಿಸುವುದು)

----

15/4/38

**ವಿಮೆ ಹಣ ಬಿಡುಗಡೆ**

861 **ಶಂಕರ್ ಬಿ. ಪಾಟೀಲ್ ಮುನೇನಕೊಪ್ಪ (ನವಲಗುಂದ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ನವಲಗುಂದ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಲವಡಿ ಗ್ರಾಮದ ವಿಜಯ ಬ್ಯಾಂಕ್‌ನಿಂದ ರೈತರಿಗೆ ಇದುವರೆಗೂ ವಿಮೆ ಹಣ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಎಷ್ಟು ಜನ ರೈತರಿಗೆ ಹಣ ಬಿಡುಗಡೆ ಮಾಡಬೇಕಾಗಿದೆ ಹಾಗೂ ಬಾಕಿಯಿರುವ ಪ್ರಕರಣಗಳೆಷ್ಟು; (ಸಂಪೂರ್ಣ ವಿವರ ನೀಡುವುದು)
ಇ) ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವರ ನೀಡುವುದು)

----

15/4/702

**ತೋಟಗಾರಿಕಾ ಬೇಸಾಯಕ್ಕೆ ಹೆಚ್ಚು ಸೌಲಭ್ಯಗಳು**

**862 ಸಿದ್ದು ಸವದಿ (ತೇರದಾಳ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿರುವ ತೋಟಗಾರಿಕಾ ಪ್ರದೇಶವೆಷ್ಟು; (ಜಿಲ್ಲಾವಾರು ಪೂರ್ಣ ಮಾಹಿತಿ ಒದಗಿಸುವುದು)
ಆ) ರೈತರಿಗೆ ಯಾವ ರೀತಿಯ ಸೌಲಭ್ಯಗಳು ದೊರಕುತ್ತಿವೆ; ಅವುಗಳನ್ನು ಪಡೆಯಲು ಇರುವ ನಿಯಮಗಳೇನು;
ಇ) ಪ್ರಸಕ್ತ ಸಾಲಿನಲ್ಲಿ ಹಾಕಿಕೊಂಡಿರುವ ಗುರಿಗಳೇನು ಹಾಗೂ ತೋಟಗಾರಿಕಾ ಬೆಳೆಗಳಿಗೆ ರೋಗಗಳು ಹೆಚ್ಚಾಗಿ ಅವುಗಳನ್ನು ನಿಯಂತ್ರಣಗೊಳಿಸುವಲ್ಲಿ ಸರ್ಕಾರ ಇದುವರೆವಿಗೂ ಕೈಗೊಂಡಿರುವ ಕ್ರಮವೇನು; (ಸಂಪೂರ್ಣವಾದ ಮಾಹಿತಿಯನ್ನು ಒದಗಿಸುವುದು)
ಈ) ಹಾಗಿದ್ದಲ್ಲಿ, ತೋಟಗಾರಿಕೆ ಇಲಾಖಾ ವತಿಯಿಂದ ಯಾವ ಯಾವ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಗೊಳಿಸಿದೆ; ಇಲ್ಲವಾದಲ್ಲಿ ಬೆಂಬಲ ಬೆಲೆ ನೀಡಲು ಕ್ರಮ ಜರುಗಿಸುವುದೇ;
ಉ) ತೋಟಗಾರಿಕಾ ಬೆಳೆಗಳನ್ನು ಸಂಗ್ರಹಿಸಲು ಶೀತಲೀಕರಣಕ್ಕೆ (ಕೋಲ್ಡ್ ಸ್ಟೋರೇಜ್) ನೀಡುವ ಸಹಾಯಧನದ ಮೊತ್ತವೆಷ್ಟು; ಪ್ರಸ್ತುತ ರಾಜ್ಯದಲ್ಲಿರುವ ಶೀತಲೀಕರಣವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

----

15/4/1314

**ಹಿಂದುಳಿದ ವರ್ಗಗಳಿಗೆ ಸೌಲಭ್ಯಗಳು**

**863 ಸಿದ್ದು ಸವದಿ (ತೇರದಾಳ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಹಿಂದುಳಿದ ವರ್ಗದ ಯಾವ ಯಾವ ಸಮುದಾಯದ ಜನರಿಗೆ ಯಾವ ರೀತಿಯ ಸೌಲಭ್ಯ ಒದಗಿಸಲಾಗುತ್ತಿದೆ (ಸಂಪೂರ್ಣ ಮಾಹಿತಿ ಒದಗಿಸುವುದು);
ಆ) 2018 ಮತ್ತು 201920ನೇ ಸಾಲಿನಲ್ಲಿ ಯಾವ ಯಾವ ಸೌಲಭ್ಯಗಳನ್ನು ಎಷ್ಟು ಫಲಾನುಭವಿಗಳಿಗೆ ಒದಗಿಸಲಾಗಿದೆ (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ಒದಗಿಸುವುದು);
ಇ) ಸದರಿ ಸಮುದಾಯಗಳಿಗೆ ಸೌಲಭ್ಯಗಳನ್ನು ಒದಗಿಸುವಲ್ಲಿ ಕ್ಷೇತ್ರವಾರು ಬಹಳಷ್ಟು ತಾರತಮ್ಯವಾಗುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;
ಈ) ಗಂಗಾ ಕಲ್ಯಾಣಕ್ಕೆ ಈಗಿರುವ ಅನುದಾನ ಕೊರತೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅನುದಾನ ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;
ಉ) ಈ ಹಿಂದೆ ಮಂಜೂರಾದ ಫಲಾನುಭವಿಗಳಿಗೆ ಪಂಪ್‌ಸೆಟ್‌ಗಳನ್ನು ನೀಡದಿರುವುದು ಪ್ರಕರಣಗಳಲ್ಲಿ ಅಂತಹ ಗುತ್ತಿಗೆದಾರರ ಮೇಲೆ ಯಾವ ಕ್ರಮ ಜರುಗಿಸಲಾಗುವುದು?

----

15/4/1315

## ಮೀನುಗಾರಿಕೆ ಇಲಾಖೆಗೆ ಸೇರಿದ ಸಂಘಗಳು

**864** **ಸಿದ್ದು ಸವದಿ (ತೇರದಾಳ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ತೇರದಾಳ ಮತಕ್ಷೇತ್ರದಲ್ಲಿ ಮೀನುಗಾರಿಕೆ ಇಲಾಖೆಗೆ ಸೇರಿದ ಎಷ್ಟು ಸಂಘಗಳಿವೆ; ಅವುಗಳಿಗೆ ಯಾವ ಯಾವ ಪ್ರದೇಶದಲ್ಲಿ ಮೀನುಗಾರಿಕೆ ಮಾಡುವ ಬಗ್ಗೆ ಪರವಾನಿಗೆಯನ್ನು ಕೊಡಲಾಗಿದೆ; ಯಾರ್ಯಾರಿಗೆ ಗುತ್ತಿಗೆ ಕೊಡಲು ನಿಯಮಾವಳಿಗಳಲ್ಲಿ ಅವಕಾಶವಿದೆ;
ಆ) ರಾಜ್ಯದಲ್ಲಿ ಮೀನುಗಾರರಿಗೆ ನೀಡಿದಂತಹ ಸೌಲಭ್ಯಗಳು ಯಾವುವು (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ಒದಗಿಸುವುದು)?

----

15/4/1316

## ಅನುದಾನ ಮಂಜೂರು ಮಾಡುವುದು

**865** **ಸಿದ್ದು ಸವದಿ (ತೇರದಾಳ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಎರಡು ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರು ಮಾಡಿದ ಅನುದಾನವೆಷ್ಟು; ಈ ಬಗ್ಗೆ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಕ್ಷೇತ್ರವಾರು ಸಂಪೂರ್ಣವಾದ ಮಾಹಿತಿ ಒದಗಿಸುವುದು);
ಆ) ತೇರದಾಳ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅತ್ಯಂತ ಹೆಚ್ಚು ಕಾಲೋನಿಗಳಿದ್ದು, ನಾಲ್ಕಾರು ಭಾರಿ ಅವುಗಳ ಮೂಲಭೂತ ಸೌಲಭ್ಯಕ್ಕಾಗಿ ಅನುದಾನದ ಬೇಡಿಕೆ ಸಲ್ಲಿಸಿರುವುದನ್ನು ಸರ್ಕಾರ ಗಮನಿಸಿದೆಯೇ;
ಇ) ಬೇಡಿಕೆಗನುಸಾರವಾಗಿ ಕ್ಷೇತ್ರದ ಮೂಲ ಸೌಲಭ್ಯಕ್ಕಾಗಿ ಅವಶ್ಯವಿರುವ ಅನುದಾನವನ್ನು ಮಂಜೂರು ಮಾಡಲಾಗುವುದೇ;
ಈ) ಪ್ರಸ್ತುತ ಸಾಲಿನಲ್ಲಿ ಈ ಬಗ್ಗೆ ಇಲಾಖೆಯಿಂದ ಬಿಡುಗಡೆಗೊಳಿಸಲಾಗುವ ಮೊತ್ತವೆಷ್ಟು ?

----

15/4/1317

## ರೈತರಿಗೆ ನೀಡುವ ಸೌಲಭ್ಯಗಳು

**866** **ಸಿದ್ದು ಸವದಿ (ತೇರದಾಳ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೃಷಿ ಇಲಾಖೆಯಿಂದ ರೈತರಿಗೆ ನೀಡುವ ಸೌಲಭ್ಯಗಳಾವುವು; (ಸಂಪೂರ್ಣ ಮಾಹಿತಿ ಒದಗಿಸುವುದು)
ಆ) ರೈತರ ಜಮೀನುಗಳಿಗೆ ನದಿಯಿಂದ ನೀರಾವರಿ ಸೌಲಭ್ಯಕ್ಕಾಗಿ ಪೈಪ್ ಲೈನ್ ವ್ಯವಸ್ಥೆ ಒದಗಿಸಲಾಗುವುದೇ;
ಇ) ರೈತರಿಗೆ ಕೃಷಿ ಹೊಂಡ ಮಂಜೂರು ಮಾಡಲು ಇರುವ ನಿಯಮಗಳೇನು; ಕಮಾಂಡ ಏರಿಯಾದಲ್ಲಿ ನೀರು ಬಾರದ ರೈತರಿಗೆ ಕೃಷಿ ಹೊಂಡಗಳನ್ನು ಕೊಡದಿರಲು ಕಾರಣಗಳೇನು; ಹಾಗಿದ್ದಲ್ಲಿ, ಪರ್ಯಾಯ ವ್ಯವಸ್ಥೆ

ಮಾಡಲಾಗುವುದೇ;

----

15/4/569

**ರೈತರ ಸಾಲಮನ್ನಾ**

867 **ಎಂ.ಎಸ್. ಸೋಮಲಿಂಗಪ್ಪ (ಸಿರಗುಪ್ಪ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

(ಅ) ಕಳೆದ 2 ವರ್ಷಗಳಿಂದ ರಾಜ್ಯದಲ್ಲಿ ರೈತರ ಸಾಲಮನ್ನಾ ಆಗಿರುವ ಹಣವೆಷ್ಟು ಇನ್ನೂ ಬಾಕಿ ಉಳಿದಿರುವ ಸಾಲ ಮನ್ನಾದ ಹಣವೆಷ್ಟು; (ಸಂಪೂರ್ಣ ವಿವರ ಒದಗಿಸುವುದು)
(ಆ) ಕಳೆದ 2 ವರ್ಷಗಳಿಂದ ಸಿರುಗುಪ್ಪ ಮತಕ್ಷೇತ್ರದಲ್ಲಿ ಎಷ್ಟು ರೈತರ ಸಾಲ ಮನ್ನಾ ಮಾಡಲಾಗಿದೆ; (ವಿವರ ಒದಗಿಸುವುದು)
(ಇ) ಸಹಕಾರ ಬ್ಯಾಂಕ್ ಗಳಿಂದ ಎಷ್ಟು ರೈತರ ಸಾಲ ಮನ್ನಾ ಮಾಡಲಾಗಿದೆ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಎಷ್ಟು ಸಾಲ ಮನ್ನಾ ಮಾಡಲಾಗಿದೆ; (ಸಂಪೂರ್ಣ ವಿವರ ಒದಗಿಸುವುದು)
(ಈ) ಆಂಧ್ರ ಪ್ರದೇಶದ ನಿವಾಸಿಗಳಾಗಿದ್ದು ಕರ್ನಾಟಕದಲ್ಲಿ ಜಮೀನುಗಳನ್ನು ಹೊಂದಿರುವ ರೈತರಿಗೆ ಕರ್ನಾಟಕದಲ್ಲಿನ ಸಹಕಾರ ಬ್ಯಾಂಕ್‌ಗಳು ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳು ಸಾಲ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ಒದಗಿಸುವುದು)
(ಉ) ಹಾಗಾದ್ದಲ್ಲಿ, ಇಂತಹ ರೈತರಿಗೆ ಸಾಲಮನ್ನಾ ಯೋಜನೆ ಎಷ್ಟು ರೈತರಿಗೆ ಪ್ರಯೋಜನವಾಗಿದೆ? (ಸಂಪೂರ್ಣ ವಿವರ ನೀಡುವುದು)

----

15/4/1072

**ಪಶು ಆಸ್ಪತ್ರೆ**

868 **ಎಂ.ಎಸ್. ಸೋಮಲಿಂಗಪ್ಪ (ಸಿರಗುಪ್ಪ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸಿರಗುಪ್ಪ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ತೆಕ್ಕಲಕೋಟೆ ಪಶು ಆಸ್ಪತ್ರೆ ಕಟ್ಟಡ ಕಾಮಗಾರಿ ಯಾವ ವರ್ಷದಲ್ಲಿ ಪೂರ್ಣಗೊಂಡಿದೆ;
ಆ) ಪಶು ಆಸ್ಪತ್ರೆಯ ಕಾಮಗಾರಿಗೆ ಮಂಜೂರಾದ ಹಾಗೂ ಖರ್ಚಾದ ಅನುದಾನವೆಷ್ಟು (ಸಂಪೂರ್ಣ ಮಾಹಿತಿ ಒದಗಿಸುವುದು);
ಇ) ಸದರಿ ಪಶು ಆಸ್ಪತ್ರೆಯು ಯಾವ ವರ್ಷದಲ್ಲಿ ಪೂರ್ಣಗೊಂಡಿದೆ; ಯಾವ ವರ್ಷದಲ್ಲಿ ಪಶು ಸಂಗೋಪನೆ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗಿದೆ (ಮಾಹಿತಿ ಒದಗಿಸುವುದು)?

----

15/4/1073

**ಮೊರಾರ್ಜಿ ವಸತಿ ಶಾಲೆಯ ಕಟ್ಟಡದ ಕಾಮಗಾರಿ**

869 **ಎಂ.ಎಸ್. ಸೋಮಲಿಂಗಪ್ಪ (ಸಿರಗುಪ್ಪ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಸಿರುಗುಪ್ಪ ಮತ ಕ್ಷೇತ್ರದ ಬಗ್ಗೂರು ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡ ಕಾಮಗಾರಿ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ ಕಾಮಗಾರಿ ಕಟ್ಟಡ ಪ್ರಾರಂಭವಾಗದಿರಲು ಕಾರಣವೇನು; ಸದರಿ ಕಾಮಗಾರಿಗೆ ನಿಗದಿಪಡಿಸಿದ ಅನುದಾನವೆಷ್ಟು;
ಇ) ಸದರಿ ಶಾಲೆಗೆ ಬೇಕಾಗಿರುವ ಜಮೀನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆ ಆಗಿದೆಯೇ;
ಈ) ಸದರಿ ವಸತಿ ಶಾಲೆಯು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

----

**15/4/135**

**ಕೃಷಿ ಸಿಂಚನ ಯೋಜನೆ**

**870 ವಿ. ಸೋಮಣ್ಣ (ಗೋವಿಂದರಾಜನಗರ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ 3 ವರ್ಷಗಳಿಂದೀಚೆಗೆ ಪ್ರಧಾನಮಂತ್ರಿ ಕೃಷಿ ಸಿಂಚನ ಯೋಜನೆಯಡಿಯಲ್ಲಿ ರಾಜ್ಯಕ್ಕೆ ಬಿಡುಗಡೆಯಾದ ಹಣವೆಷ್ಟು; (ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರ ನೀಡುವುದು)
ಆ) ಕಳೆದ 3 ವರ್ಷಗಳಿಂದೀಚೆಗೆ ರಾಜ್ಯ ಸರ್ಕಾರದಿಂದ ಹನಿ ನೀರಾವರಿ ವ್ಯವಸ್ಥೆಗೆ ಬಿಡುಗಡೆ ಮಾಡಲಾಗಿರುವ ಹಣವೆಷ್ಟು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)?

----

**15/4/1311**

**ರೈತರಿಗೆ ಯೋಜನೆಗಳು**

**871 ಸೌಮ್ಯ ರೆಡ್ಡಿ (ಜಯನಗರ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಮುಂಗಾರು ವಿಳಂಬವಾಗಿರುವುದರಿಂದ ರೈತರು ಶೇಕಡಾ 25 ರಿಂದ 30 ರಷ್ಟು ಮಾತ್ರ ಬಿತ್ತನೆ ಮಾಡಿರುವುದು ನಿಜವೇ;
ಆ) ಇಂತಹ ಸಂದರ್ಭದಲ್ಲಿ ರೈತರು ಯಾವ ರೀತಿಯ ಬೆಳೆ ಬೆಳೆಯಬಹುದೆಂದು ಕೃಷಿ ಇಲಾಖೆಯಿಂದ ರೈತರಿಗೆ ಮಾರ್ಗದರ್ಶನ ನೀಡಲಾಗುತ್ತಿದೆಯೇ;
ಇ) ಮುಂಗಾರು ವಿಳಂಬವಾಗಿರುವುದರಿಂದ ಶೇಕಡಾ 70 ರಿಂದ 75 ರಷ್ಟು ರೈತರು ಬೆಳೆ ಬೆಳೆಯಲಾಗದ ಕಾರಣ ಸರ್ಕಾರದಿಂದ ರೈತರಿಗಾಗಿ ಯಾವ ಯೋಜನೆಗಳನ್ನು ರೂಪಿಸಲಾಗಿದೆ; ರೈತರಿಗೆ ಯಾವೆಲ್ಲಾ ರೀತಿ ಪರಿಹಾರ ಒದಗಿಸಲಾಗುತ್ತಿದೆ;
ಈ) ಕೃಷಿ ಇಲಾಖೆ ವತಿಯಿಂದ ರೈತರಿಗೆ ಯಾವ ಯೋಜನೆಗಳಿವೆ ಹಾಗೂ ಸರ್ಕಾರದಿಂದ ಯಾವ ರೀತಿ ಬೆಂಬಲ ನೀಡಲಾಗುತ್ತಿದೆ?

----

**15/4/1312**

## ಸಾಲ ಸೌಲಭ್ಯ

**872 ಸೌಮ್ಯ ರೆಡ್ಡಿ (ಜಯನಗರ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ವಿವಿಧ ಯೋಜನೆಯಡಿ ಸಾಲ ಸೌಲಭ್ಯ ಕೋರಿ ಸಲ್ಲಿಸಿರುವ ಅರ್ಜಿಗಳೆಷ್ಟು;
ಆ) ಜಯನಗರ ವಿಧಾನಸಭಾ ಕ್ಷೇತ್ರಕ್ಕೆ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಸಾಲ ಸೌಲಭ್ಯ ದೊರಕಿಸಲು ನಿಗಧಿಪಡಿಸಿರುವ ಆರ್ಥಿಕ ಗುರಿ ಎಷ್ಟು;
ಇ) ಸದರಿ ನಿಗಮದ ವತಿಯಿಂದ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಯಿಂದ ಅರ್ಜಿ ಸಲ್ಲಿಸಿರುವ ಎಲ್ಲಾ ಅರ್ಹ ಫಲಾನುಭವಿಗಳಿಗೆ ಸಾಲ ಸೌಲಭ್ಯ ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಹಾಗಿದ್ದಲ್ಲಿ, ಜಯನಗರ ವಿಧಾನಸಭಾ ಕ್ಷೇತ್ರಕ್ಕೆ ಸದರಿ ನಿಗಮದ ವತಿಯಿಂದ ವಿವಿಧ ಯೋಜನೆಯಡಿ ಸಾಲ ಸೌಲಭ್ಯ ಕೋರಿ ಸಲ್ಲಿಸಿರುವ ಫಲಾನುಭವಿಗಳಿಗೆ ಸಾಲ ಸೌಲಭ್ಯ ಮಂಜೂರು ಮಾಡಲು ಹೆಚ್ಚುವರಿ ಅನುದಾನ ಒದಗಿಸಲಾಗುವುದೇ?

----

15/4/1313

## ಪಶುವೈದ್ಯಕೀಯ ಆಸ್ಪತ್ರೆ

**873 ಸೌಮ್ಯ ರೆಡ್ಡಿ (ಜಯನಗರ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿರುವ ಪಶು ವೈದ್ಯಕೀಯ ಆಸ್ಪತ್ರೆಗಳೆಷ್ಟು; ಇವುಗಳ ಪೈಕಿ ಶಸ್ತ್ರಚಿಕಿತ್ಸೆ ಒದಗಿಸುವ ಆಸ್ಪತ್ರೆಗಳೆಷ್ಟು;
ಆ) ಜಾನುವಾರುಗಳಿಗೆ ಶಸ್ತ್ರಚಿಕಿತ್ಸೆ ಮಾಡಲು ಬೆಂಗಳೂರು ಅಥವಾ ಬೀದರ್ ಜಿಲ್ಲೆಯಲ್ಲಿ ಸರ್ಕಾರಿ ಪಶು ವೈದ್ಯಕೀಯ ಆಸ್ಪತ್ರೆಗೆ ತೆರಳಬೇಕಾಗಿರುವುದು ನಿಜವೇ;
ಇ) ಜಾನುವಾರುಗಳಿಗೆ ಶಸ್ತ್ರಚಿಕಿತ್ಸೆ ಮಾಡುವ ಆಸ್ಪತ್ರೆಯನ್ನು ಜಿಲ್ಲೆಗೆ ಒಂದರಂತೆ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;
ಈ) ಪಶು ಮತ್ತು ಜಾನುವಾರುಗಳಿಗೆ ಕಾಲಕಾಲಕ್ಕೆ ಹಾಕಬೇಕಿರುವ ಲಸಿಕೆಗಳನ್ನು ಸರ್ಕಾರದಿಂದ ಒದಗಿಸಲಾಗುತ್ತಿದೆಯೇ? (ವಿವರ ಒದಗಿಸುವುದು)

----

15/4/709

## ರೈತರಿಗೆ ದೊರೆಯುತ್ತಿರುವ ಪ್ರಯೋಜನಗಳು

**874 ಡಾ|| ಕೆ ಸುಧಾಕರ್ (ಚಿಕ್ಕಬಳ್ಳಾಪುರ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕೃಷಿ ಇಲಾಖೆಯಲ್ಲಿ ರಿಯಾಯಿತಿ ದರದಲ್ಲಿ ವಿತರಣೆಯಾಗುತ್ತಿರುವ ಬಿತ್ತನೆ ಬೀಜ, ರಸಗೊಬ್ಬರ,

ಹೈಟೆಕ್ ಕೃಷಿ ಉಪಕರಣಗಳು, ಯಂತ್ರಗಳು, ಹನಿ ನೀರಾವರಿ ಘಟಕಗಳು ಇನ್ನಿತರೆ ಕೃಷಿ ಪರಿಕರಗಳಿಗೆ ಸಂಬಂಧಿಸಿದಂತೆ ಸರಬರಾಜುದಾರರನ್ನು ಆಯ್ಕೆ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಅನುಸರಿಸುತ್ತಿರುವ ಮಾನದಂಡಗಳೇನು; ಇದರಲ್ಲಿ ಪಾರದರ್ಶಕತೆ ನಿಯಮಾವಳಿಗಳನ್ನು ಅನುಸರಿಸಲಾಗುತ್ತಿದೆಯೇ; (ಮಾಹಿತಿಯನ್ನು ಒದಗಿಸುವುದು)

ಇ) ಕೃಷಿ ಪರಿಕರಗಳ ವಿತರಣೆ ಆಯ್ಕೆ ಮಾಡಿರುವ ಸಂಸ್ಥೆಗಳ ದರಪಟ್ಟಿಯನ್ನು ಪ್ರಸಕ್ತ ಸಾಲಿನಲ್ಲಿ ಅನುಮೋದಿಸಲಾಗಿದೆಯೇ; ಹಾಗಿದ್ದಲ್ಲಿ, ದರಪಟ್ಟಿಯು ಎಲ್ಲಾ ಕೃಷಿ ಪರಿಕರಗಳು, ಯಂತ್ರೋಪಕರಣಗಳಿಗೆ ಅನ್ವಯಿಸಲಾಗುವುದೇ;

ಈ) ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿದಂತೆ ಕೃಷಿ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಗಳಿಂದ ಆಗಿರುವ ಪ್ರಗತಿ ವರದಿಯನ್ನು ಯೋಜನಾವಾರು ಕಾಮಗಾರಿವಾರು ಭೌತಿಕ ಮತ್ತು ಆರ್ಥಿಕ ನಿರ್ವಹಣೆಯೇನು? (ವಿವರ ಒದಗಿಸುವುದು)

----

**15/4/1220**

**ಪ್ರವಾಸೋದ್ಯಮ ಸ್ಥಳಗಳ ಅಭಿವೃದ್ಧಿ**

**875 ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗುರುತಿಸಿರುವ ಪ್ರವಾಸೋದ್ಯಮ ಸ್ಥಳಗಳಾವುವು; ಇವುಗಳ ಅಭಿವೃದ್ಧಿಗಾಗಿ ಕಳೆದ 3 ವರ್ಷದಲ್ಲಿ ನೀಡಿರುವ ಅನುದಾನವೆಷ್ಟು; (ವರ್ಷವಾರು, ಸ್ಥಳವಾರು ವಿವರ ಒದಗಿಸುವುದು)

ಆ) ಪ್ರಸ್ತುತ ಆಯವ್ಯಯ ವರ್ಷದಲ್ಲಿ ಸದರಿ ಕ್ಷೇತ್ರಕ್ಕೆ ಪ್ರವಾಸೋದ್ಯಮ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಮೀಸಲಿರಿಸಿದ ಅನುದಾನವೆಷ್ಟು;

ಇ) ಬೈಂದೂರು ವಿಧಾನಸಭಾ ಕ್ಷೇತ್ರ ಮಲೆನಾಡು ಮತ್ತು ಕರಾವಳಿ ಪ್ರದೇಶವನ್ನು ಒಳಗೊಂಡಿದ್ದು, ಸಾಕಷ್ಟು ಪ್ರವಾಸಿ ತಾಣಗಳಿದ್ದು, ಇವುಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ಪೂರ್ಣ ವಿವರ ನೀಡುವುದು)

----

**15/4/1221**

**ಸಾಲ ಯೋಜನೆಯ ಅವಧಿ ವಿಸ್ತರಣೆ**

**876 ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ದಿ: ಡಿ. ದೇವರಾಜ ಅರಸು ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನವಾಗುವ ಅರಿವು ಶೈಕ್ಷಣಿಕ ಸಾಲ ಯೋಜನೆಯ ಅರ್ಜಿ ತೆಗೆದುಕೊಳ್ಳುವ ಅಂತಿಮ ದಿನಾಂಕವು ಸಿ.ಇ.ಟಿ.ಯನ್ನು ಬರೆದ ವಿದ್ಯಾರ್ಥಿಗಳ ಫಲಿತಾಂಶಕ್ಕಿಂತ ಮೊದಲೇ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸಾಕಷ್ಟು ಬಡ ಅರ್ಹ ವಿದ್ಯಾರ್ಥಿಗಳು ಈ ಯೋಜನೆಯಡಿ ಅರ್ಜಿ ಸಲ್ಲಿಸಲು ಅವಕಾಶಸಿಗದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಪ್ರಸ್ತುತ ಅರ್ಜಿ ಸಲ್ಲಿಸಲು ಅವಕಾಶ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?

----

15/4/1222

**ವಸತಿ ನಿಲಯ ಸೀಟು ಹಂಚಿಕೆ**

877 **ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಕಾಲೇಜು ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲಾತಿ ಪ್ರಕ್ರಿಯೆ ಮುಗಿದ ನಂತರ ವಸತಿ ನಿಲಯ ಸೀಟುಗಳು ಹಂಚಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಾಲೇಜು ಪ್ರವೇಶ ಪಡೆದ ನಂತರ ವಸತಿಗೃಹ ಸ್ಥಳಾವಕಾಶ ದೊರೆಯದೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ವಾಸ್ತವ್ಯಕ್ಕೆ ಹಾಗೂ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

----

15/4/1223

**ಮೀನುಗಾರಿಕಾ ಇಲಾಖೆಯ ಯೋಜನೆಗಳು**

878 **ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಮೀನುಗಾರಿಕಾ ಇಲಾಖೆಯಡಿಯಲ್ಲಿ ಬರುವ ಯೋಜನೆಗಳು ಯಾವುವು;

ಆ) ಕಳೆದ 3 ವರ್ಷಗಳಿಂದ ಮೀನುಗಾರಿಕೆ ಇಲಾಖೆಯಲ್ಲಿ ಯಾವ ಯೋಜನೆಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ಅನುದಾನವಾರು, ಯೋಜನಾವಾರು, ತಾಲ್ಲೂಕುವಾರು ಪೂರ್ಣ ವಿವರ ಒದಗಿಸುವುದು)

ಇ) ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯು ಸಾಕಷ್ಟು ಕರಾವಳಿ ಭಾಗವನ್ನು ಹೊಂದಿದ್ದು, ಮೀನುಗಾರಿಕೆ ಉತ್ತೇಜನಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

----

15/4/192

**ವಿದ್ಯಾರ್ಥಿ ನಿಲಯಗಳ ಅವ್ಯವಸ್ಥೆ**

879 **ವಿ ಸುನಿಲ್ ಕುಮಾರ್ (ಕಾರ್ಕಳ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಆರ್ಥಿಕವಾಗಿ ಹಿಂದುಳಿದವರ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಲೆಂದು ನಿರ್ಮಿಸಿರುವ ವಿದ್ಯಾರ್ಥಿ ನಿಲಯಗಳು ಅವ್ಯವಸ್ಥೆಯ ಆಗರವಾಗಿ ಭ್ರಷ್ಟಾಚಾರದ ಕೂಪವಾಗಿರುವ ಬಗ್ಗೆ ಮಾಧ್ಯಮಗಳಲ್ಲಿ ನಿರಂತರವಾಗಿ ವರದಿಯಾಗುತ್ತಿದ್ದರೂ ಇದನ್ನು ಸರಿಪಡಿಸುವಲ್ಲಿ ಸರ್ಕಾರ ವಿಫಲವಾಗಿದೆಯೇ;

ಆ) ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗಾಗಿ ನಿರ್ಮಿಸಿರುವ ಎಷ್ಟು ವಸತಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ; ವಾರ್ಷಿಕ ಎಷ್ಟು ಮೊತ್ತದ ಹಣ ವಸತಿ ನಿಲಯಗಳ ವಿದ್ಯಾರ್ಥಿಗಳಿಗಾಗಿ ವಿನಿಯೋಗಿಸಲಾಗುತ್ತಿದೆ; ಸದರಿ ವಸತಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಯಾವ ಯಾವ ಸೌಲಭ್ಯಗಳನ್ನು

ಒದಗಿಸಲಾಗುತ್ತಿದೆ; (ಸಂಪೂರ್ಣ ವಿವರಗಳನ್ನು ಒದಗಿಸುವುದು)
ಇ) ಮಾಧ್ಯಮಗಳ ವರದಿಯನ್ನು ಆಧರಿಸಿ ವಸತಿ ನಿಲಯಗಳ ಬಗ್ಗೆ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

----

15/4/1326

**ಗಂಗಾಕಲ್ಯಾಣ ಯೋಜನೆಯ ಅನುದಾನ**

**880 ವಿ ಸುನಿಲ್ ಕುಮಾರ್ (ಕಾರ್ಕಳ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಗಂಗಾಕಲ್ಯಾಣ ಯೋಜನೆಯಡಿ ಬಾವಿ/ಕೊಳವೆ ಬಾವಿ ಮಂಜೂರಾಗಿರುವ ಫಲಾನುಭವಿಗಳಿಗೆ ಟೆಂಡರ್ ಪ್ರಕ್ರಿಯೆ ವಿಳಂಬದಿಂದಾಗಿ ಮತ್ತು ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ವಿಳಂಬವಾಗಿದ್ದು ಉದ್ದೇಶಿತ ಯೋಜನೆಯ ಅನುಕೂಲ ಫಲಾನುಭವಿಗಳಿಗೆ ಕಳೆದ ಮೂರು ವರ್ಷಗಳಿಂದ ಸಮರ್ಪಕವಾಗಿ ದೊರಕದೇ ಇರುವುದನ್ನು ಇಲಾಖೆ ಗಂಭೀರವಾಗಿ ಪರಿಗಣಿಸದೇ ಇರಲು ಕಾರಣಗಳೇನು;
ಆ) ಮೂರು ವರ್ಷಗಳಿಂದ ಗಂಗಾಕಲ್ಯಾಣ ಯೋಜನೆಯಡಿ ಎಷ್ಟು ಬಾವಿ ಮತ್ತು ಕೊಳವೆ ಬಾವಿಗಳನ್ನು ಮಂಜೂರು ಮಾಡಲಾಗಿದೆ (ಜಿಲ್ಲಾವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)
ಇ) ಮಂಜೂರಾಗಿರುವ ಎಷ್ಟು ಬಾವಿ/ಕೊಳವೆ ಬಾವಿಗಳ ಟೆಂಡರ್ ಪ್ರಕ್ರಿಯೆ ಮುಗಿದು ಕಾಮಗಾರಿ ಪೂರ್ಣಗೊಳಿಸಲಾಗಿದೆ ಇದುವರೆಗೂ ಎಷ್ಟು ಟೆಂಡರ್ ಬಾಕಿಯಿದೆ; (ಉಡುಪಿ ಜಿಲ್ಲೆಯ ಗ್ರಾಮವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)
ಈ) ಬಾವಿ/ಕೊಳವೆ ಬಾವಿಗಳ ಕಾಮಗಾರಿ ಮುಗಿದರೂ ಪಂಪ್ ಸೆಟ್ ನೀಡಲು ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿಯಿರುವ ಪ್ರಕರಣಗಳೆಷ್ಟು?(ಉಡುಪಿ ಜಿಲ್ಲೆಯ ಗ್ರಾಮವಾರು ಸಂಪೂರ್ಣ ವಿವರಗಳನ್ನುಒದಗಿಸುವುದು)

----

15/4/1328

**ನಿಗಮದಿಂದ ನೀಡಿದ ಸಾಲ ಮನ್ನಾ**

**881 ವಿ ಸುನಿಲ್ ಕುಮಾರ್ (ಕಾರ್ಕಳ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸಾಂಪ್ರದಾಯಿಕ ವೃತ್ತಿ ಮತ್ತು ಕುಶಲ ಕರ್ಮಿಗಳಿಗೆ ಅವರ ವೃತ್ತಿ ಕೌಶಲ್ಯವನ್ನು ಅಭಿವೃದ್ಧಿಪಡಸಿಕೊಳ್ಳಲು ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನೀಡಲಾಗುವ ಸಾಲವನ್ನು ಮನ್ನಾ ಮಾಡಲಾಗಿದೆಯೇ;
ಆ) ಸದರಿ ಯೋಜನೆಯಡಿ ಫಲಾನುಭವಿಗಳಿಗೆ ನೀಡಲಾಗುವ ಮೊತ್ತವೆಷ್ಟು; ಇದರಲ್ಲಿ ಎಷ್ಟು ಮೊತ್ತದ ಸಹಾಯಧನ ಒದಗಿಸಲಾಗುತ್ತಿದೆ; ಉಳಿದ ಮೊತ್ತವನ್ನು ಯಾವ ಪ್ರಮಾಣದ ಬಡ್ಡಿಯಲ್ಲಿ ವಾಪಸ್ಸು ಪಡೆಯಲಾಗುತ್ತಿದೆ (ಸಂಪೂರ್ಣ ವಿವರಗಳನ್ನು ಒದಗಿಸುವುದು);
ಇ) ಸದರಿ ನಿಗಮದ ವತಿಯಿಂದ ಕಳೆದ 3 ವರ್ಷಗಳಿಂದ ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಂಪ್ರದಾಯಿಕ ವೃತ್ತಿ ಮತ್ತು ಕುಶಲ ಕರ್ಮಿ ವೃತ್ತಿಯ ಸೌಲಭ್ಯಕ್ಕಾಗಿ ಎಷ್ಟು ಮಂದಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ; ಎಷ್ಟು ಮೊತ್ತದ ಸಾಲ ಒದಗಿಸಲಾಗಿದೆ (ಉಡುಪಿಉತ್ತರ ಕನ್ನಡ ಜಿಲ್ಲೆಗಳ

ಫಲಾನುಭವಿಗಳ ಹೆಸರು ಸಹಿತ ಸಂಪೂರ್ಣ ವಿವರಗಳನ್ನು ಒದಗಿಸುವುದು);

ಈ) ಸದರಿ ಯೋಜನೆಯಡಿ ಸಾಲ ಪಡೆದ ಫಲಾನುಭವಿಗಳಿಗೆ ಬ್ಯಾಂಕ್‌ನವರು ಯಾವುದೇ ನೋಟೀಸು ನೀಡದೆಅಧಿಕ ಬಡ್ಡಿ ದರದಲ್ಲಿ ಹಣ ಪಾವತಿಸುವಂತೆ ಕಿರುಕುಳ ನೀಡುತ್ತಿರುವ ಬಗ್ಗೆ ಇಲಾಖೆಯ ನಿಲುವೇನು?

----

15/4/189

**ವಸತಿ ನಿಲಯಗಳು**

882 **ಜಿ ಹೆಚ್ ತಿಪ್ಪಾರೆಡ್ಡಿ (ಚಿತ್ರದುರ್ಗ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಚಿತ್ರದುರ್ಗ ತಾಲ್ಲೂಕಿನಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಹಾಗೂ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ನಿಲಯಗಳ ಸಂಖ್ಯೆ ಎಷ್ಟು;

ಇ) ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಸತಿ ನಿಲಯಗಳಿಗೆ ನಿಯಮಾನುಸಾರ ಬಾಡಿಗೆ ನಿಗದಿಯಾಗಿದೆಯೇ; ಹೆಚ್ಚಿನ ಬಾಡಿಗೆ ನಿಗದಿಯಾಗಿದ್ದಲ್ಲಿ, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

----

15/4/190

**ವಿದ್ಯಾರ್ಥಿ ನಿಲಯಗಳು**

883 **ಜಿ ಹೆಚ್ ತಿಪ್ಪಾರೆಡ್ಡಿ (ಚಿತ್ರದುರ್ಗ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸಮಾಜ ಕಲ್ಯಾಣ ಇಲಾಖಾವತಿಯಿಂದ ಚಿತ್ರದುರ್ಗ ತಾಲ್ಲೂಕಿನಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಹಾಗೂ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ನಿಲಯಗಳ ಸಂಖ್ಯೆ ಎಷ್ಟು;

ಇ) ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಸತಿ ನಿಲಯಗಳಿಗೆ ನಿಯಮಾನುಸಾರ ಬಾಡಿಗೆ ನಿಗದಿಯಾಗಿದೆಯೇ; ಹೆಚ್ಚಿನ ಬಾಡಿಗೆ ನಿಗದಿಯಾಗಿದ್ದಲ್ಲಿ, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ನಿಲಯಗಳಿಗೆ ಸ್ವಂತ ಕಟ್ಟಡವನ್ನು ನಿರ್ಮಾಣ ಮಾಡುವ ಕೆಲಸ ಪ್ರಗತಿಯಲ್ಲಿದೆಯೇ; ಸ್ವಂತ ಕಟ್ಟಡವನ್ನು ಯಾವಾಗ ಮುಕ್ತಾಯಗೊಳಿಸಿ ಇಲಾಖೆಗೆ ಹಸ್ತಾಂತರ ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು)

----

15/4/1128

**ಅಡಿಕೆ ಬೆಳೆ ವಿಮೆ ಯೋಜನೆ**

**884** **ಸಿ.ಎಂ.ಉದಾಸಿ (ಹಾನಗಲ್):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಶಿರಸಿ ತಾಲ್ಲೂಕು ಬನವಾಸಿ ಹೋಬಳಿಯ ಅಂಡಗಿ ಮತ್ತು ಬದನಗೋಡ ಗ್ರಾಮ ಪಂಚಾಯತಿ ವ್ಯಾಪ್ತಿಯ ರೈತರಿಗೆ 201718 ನೇ ಸಾಲಿನ ಪರಿಷ್ಕೃತ ಹವಾಮಾನ ಆಧಾರಿತ ಅಡಿಕೆ ಬೆಳೆ ವಿಮೆ ಯೋಜನೆಯಡಿ ರೈತರಿಗೆ ಕಡಿಮೆ ಪರಿಹಾರ ಮೊತ್ತವನ್ನು ಫಲಾನುಭವಿಗಳ ಖಾತೆಗೆ ಜಮಾ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರವೇ ನಿಗದಿ ಪಡಿಸಿರುವ ಪರಿಹಾರದ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ಫಲಾನುಭವಿಗಳ ಖಾತೆಗೆ ಜಮಾ ಮಾಡದಿರಲು ಕಾರಣಗಳೇನು;

ಇ) ಸದರಿ ಫಲಾನುಭವಿಗಳಿಗೆ ಪ್ರಸಕ್ತ ಸಾಲಿನಲ್ಲಾದರೂ ಪೂರ್ಣ ಪ್ರಮಾಣದ ಪರಿಹಾರ ಮೊತ್ತವನ್ನು ಜಮಾ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಹಾಗಿದ್ದಲ್ಲಿ, ಯಾವಾಗ ಜಮಾ ಮಾಡಲಾಗುವುದು?( ಸಂಪೂರ್ಣ ಮಾಹಿತಿ ನೀಡುವುದು)

----

15/4/1323

**ಯುವಕರಿಗೆ ಸೈನ್ಯಕ್ಕೆ ಸೇರ್ಪಡೆಗಾಗಿ ತರಬೇತಿ**

**885** **ಉಮಾನಾಥ ಎ. ಕೋಟಿಯನ್ (ಮೂಡಬಿದರೆ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಹಿಂದುಳಿದ ವರ್ಗಗಳ ಯುವಕರಿಗೆ ಸೈನ್ಯ ಸೇರ್ಪಡೆಗಾಗಿ ಅರ್ಹತಾ ತರಬೇತಿ ನೀಡುವ ಕುರಿತು ಇಲಾಖೆಯು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ಮತ್ತು ಪ್ರಗತಿಯ ವಿವರಗಳೇನು;

ಆ) ತರಬೇತಿ ಮೂಲಕ ಇದುವರೆಗೂ ಎಷ್ಟು ಯುವಕರಿಗೆ ಪ್ರೋತ್ಸಾಹಿಸಲಾಗಿದೆ;

ಇ) ಹೆಚ್ಚಿನ ಪ್ರಮಾಣದಲ್ಲಿ ಸೈನ್ಯ ಸೇರ್ಪಡೆಗೆ ಯುವಕರು ಮುಂದಾಗುವಂತೆ ಅವಕಾಶಗಳ ಹೆಚ್ಚಳಕ್ಕಾಗಿ ಹಾಗೂ ಸದರಿ ಕಾರ್ಯಕ್ರಮದ ಗುರಿ ಮತ್ತು ಸಾಧನೆಯ ಬಗ್ಗೆ ಸರ್ಕಾರದ ಕೈಗೊಂಡ ಕ್ರಮಗಳೇನು;

ಈ) ಉಪಯುಕ್ತವಾದ ಈ ಯೋಜನೆಗೆ ಸಾರ್ವಜನಿಕರಿಂದ ಸ್ಪಂದನೆ ಮತ್ತು ಯುವಕರ ಪಾಲ್ಗೊಳ್ಳುವಿಕೆ ಕುರಿತು ಪ್ರಗತಿಯೇನು? (ಸಮೀಕ್ಷೆಯ ವಿವರ ಒದಗಿಸುವುದು)

----

15/4/1324

**ಮೀಸಲಿಟ್ಟ ಅನುದಾನದ ಬಳಕೆ**

**886** **ಉಮಾನಾಥ ಎ. ಕೋಟಿಯನ್ (ಮೂಡಬಿದರೆ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಿಟ್ಟ ಒಟ್ಟು ಅನುದಾನದ ಬಳಕೆಯ ಪ್ರಮಾಣದ ಕುರಿತಾದ ಸಂಖ್ಯಾ ವಿವರಗಳೇನು;

ಆ) ಮೀಸಲಿಟ್ಟ ಅನುದಾನದ ಬಳಕೆಯನ್ನು ಬೇರೆ ಯೋಜನೆಗಳಿಗಾಗಿ ಬಳಸಿದ ಎಷ್ಟು ಪ್ರಕರಣಗಳು ಕಳೆದೆರಡು ವರ್ಷಗಳಲ್ಲಿ ಗುರುತಿಸಲಾಗಿದೆ ಇದಕ್ಕೆ ಕಾರಣರಾದವರ ಮೇಲೆ ಕ್ರಮ ಜರುಗಿಸಲಾಗಿದೆಯೇ;

ಇ) ಪರಿಶಿಷ್ಟ ಜಾತಿ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳನ್ನು ಫಲಾನುಭವಿಗಳಿಗೆ ತಲುಪಿಸುವ ದಿಶೆಯಲ್ಲಿ

ಸರ್ಕಾರದ ಗುರಿ ಸಾಧನೆಗಳ ಪ್ರಮಾಣವೆಷ್ಟು?

----

15/4/1067

**ಕೃಷಿ ಡಿಪ್ಲೋಮಾ ಕಾಲೇಜು ಸ್ಥಾಪನೆ**

887 **ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಜಿಲ್ಲೆ ಹುಕ್ಕೇರಿ ಪಟ್ಟಣದಲ್ಲಿ ಕೃಷಿ ಡಿಪ್ಲೋಮಾ ಕಾಲೇಜು ಪ್ರಾರಂಭಿಸಲು ಧಾರವಾಡ ಕೃಷಿ ವಿಶ್ವವಿದ್ಯಾಲಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆಯೇ;
ಆ) ಸಲ್ಲಿಸಿದ್ದಲ್ಲಿ, ಸದರಿ ಪ್ರಸ್ತಾವನೆಯ ಪ್ರಸ್ತುತ ಹಂತವೇನು;
ಇ) ಸದರಿ ಕೃಷಿ ಡಿಪ್ಲೋಮಾ ಕಾಲೇಜು ಸ್ಥಾಪನೆಗಾಗಿ ಧಾರವಾಡ ಕೃಷಿವಿಶ್ವವಿದ್ಯಾಲಯ ಇವರಿಗೆ ಕೃಷಿ ಇಲಾಖೆಗೆ ಸಂಬಂಧಿಸಿದ ಜಮೀನವನ್ನು ಹಸ್ತಾಂತರಿಸಲಾಗಿದೆಯೇ; ಹಸ್ತಾಂತರಿಸಿದ್ದಲ್ಲಿ ಎಷ್ಟು ವಿಸ್ತೀರ್ಣದ ಜಮೀನನ್ನು ಯಾವಾಗ ಹಸ್ತಾಂತರಿಸಲಾಗಿದೆ;
ಈ) ಸದರಿ ಕೃಷಿ ಕಾಲೇಜಿಗೆ ಮಂಜೂರಾತಿ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು; ಮಂಜೂರು ಮಾಡಲು ಸರ್ಕಾರ ಕಾಲಮಿತಿಯನ್ನು ಹಾಕಿಕೊಂಡಿದೆಯೇ?

----

15/4/1068

**ರೈತರ ಬೆಳೆ ಸಾಲ ಮನ್ನಾ**

888 **ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದ ರೈತರು ವಿವಿಧ ಬ್ಯಾಂಕುಗಳಿಂದ ಪಡೆದಿರುವ ಕೃಷಿ ಸಾಲವೆಷ್ಟು; ಈ ಸಾಲದ ಪೈಕಿ ಎಷ್ಟು ಮೊತ್ತದ ಸಾಲವನ್ನು ಮನ್ನಾ ಮಾಡಲು ಸರ್ಕಾರ ಉದ್ದೇಶಿಸಲಾಗಿದೆ; ಇದಕ್ಕಾಗಿ ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ;
ಆ) ಸರ್ಕಾರವು ಪ್ರಸ್ತುತ ಜಾರಿಗೆ ತಂದಿರುವ ಸಾಲ ಮನ್ನಾ ಯೋಜನೆಯಡಿ ಕೃಷಿಕರಿಗೆ ಅನುದಾನವು ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಬಂದಿದ್ದಲ್ಲಿ, ಇಲ್ಲಿಯವರೆಗೆ ಎಷ್ಟು ರೈತರಿಗೆ ಮತ್ತು ಎಷ್ಟು ಮೊತ್ತದ ಸಾಲಮನ್ನಾ ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)
ಈ) ಇನ್ನು ಎಷ್ಟು ಜನರಿಗೆ ಅನುದಾನ ಬಿಡುಗಡೆ ಮಾಡುವುದು ಬಾಕಿ ಇದೆ; ಈ ಬಗ್ಗೆ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಸರ್ಕಾರವು ಹಾಕಿಕೊಂಡಿರುವ ಕಾಲಮಿತಿಯೇನು?

----

15/4/1069

**ಕೃಷಿ ಉತ್ತೇಜನಕ್ಕೆ ಯೋಜನೆಗಳು**

889 **ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಕೃಷಿ ಉತ್ತೇಜನಕ್ಕೆ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ;
ಆ) ಕೃಷಿ ಯೋಜನೆಗಳಿಗಾಗಿ ಸರ್ಕಾರ 201819 ಮತ್ತು 201920ನೇ ಸಾಲಿನಲ್ಲಿ ಹಂಚಿಕೆ ಮಾಡಿದ ಅನುದಾನವೆಷ್ಟು; ಆ ಪೈಕಿ ಬಿಡುಗಡೆ ಮಾಡಿದ ಅನುದಾನವೆಷ್ಟು; (ಯೋಜನೆಗಳವಾರು ವಿವರ ನೀಡುವುದು)
ಇ) ಹುಕ್ಕೇರಿ ವಿಧಾನಸಭಾ ವ್ಯಾಪ್ತಿಯಲ್ಲಿ ಈ ಯೊಜನೆಗಳಡಿ ಎಷ್ಟು ರೈತರಿಂದ ಸಹಾಯಧನಕ್ಕಾಗಿ ಬೇಡಿಕೆ ಬಂದಿರುತ್ತದೆ; ಫಲಾನುಭವಿಗಳಿಗೆ ಯೋಜನೆಗಳ ಲಾಭ ಒದಗಿಸಲಾಗಿದೆ; ಇನ್ನೂ ಎಷ್ಟು ಬಾಕಿ ಇದೆ; (ಯೋಜನೆವಾರು ವಿವರ ನೀಡುವುದು)
ಈ) ಬಾಕಿ ಉಳಿದಿರುವ ಪ್ರಕರಣಗಳಲ್ಲಿ ಯಾವಾಗ ಸಹಾಯಧನ ವಿತರಿಸಲು ಉದ್ದೇಶಿಸಲಾಗಿದೆ?

----

15/4/1070

**ಗಂಗಾ ಕಲ್ಯಾಣ ಯೋಜನೆ ಅನುಷ್ಠಾನ**

**890 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ 3 ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ವಿಧಾನ ಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ;
ಆ) ಈ ಪೈಕಿ ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ; ಇನ್ನೂ ಎಷ್ಟು ಕಾಮಗಾರಿಗಳು ಬಾಕಿ ಇವೆ, ಬಾಕಿ ಉಳಿಯಲು ಕಾರಣಗಳೇನು;
ಇ) ವಿದ್ಯುತ್ ಜೋಡಣೆ ನೀಡದೇ ಬಾಕಿ ಇರುವ ಕಾಮಗಾರಿಗಳೆಷ್ಟು; ಪಂಪ್‌ಸೆಟ್ ಪೂರೈಕೆಯಾಗದೇ ಬಾಕಿ ಇರುವ ಕಾಮಗಾರಿಗಳೆಷ್ಟು;
ಈ) ಸದರಿ ಯೋಜನೆಯಡಿ ಹುಕ್ಕೇರಿ ಸಹಕಾರಿ ಸಂಘಕ್ಕೆ ಹಣ ಬಿಡುಗಡೆಯಾಗದೇ ಕಾಮಗಾರಿಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದಯೇ; ಎಷ್ಟು ಅನುದಾನ ನೀಡಲಾಗಿದೆ ಮತ್ತು ಯಾವಾಗ ಬಿಡುಗಡೆ ಮಾಡಲಾಗುವುದು;
ಉ) ಬಾಕಿ ಉಳಿದ ಗಂಗಾಕಲ್ಯಾಣ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

----

15/4/1071

**ಅಪೇಡಾದ ಶೀತಲ ಸರಪಳಿ ಘಟಕ**

**891 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕೇಂದ್ರ ಸ್ವಾಮ್ಯದ ಅಪೇಡಾದಿಂದ ರಾಜ್ಯದಲ್ಲಿ ಶೀತಲ ಸರಪಳಿ ಘಟಕಗಳ ಸ್ಥಾಪನೆಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆಯೇ;
ಆ) ಹಾಗಿದ್ದಲ್ಲಿ, ಅಪೇಡಾದಿಂದ ಕಳೆದ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ಮಂಜೂರಾಗಿರುವ ಶೀತಲ ಸರಪಳಿ ಘಟಕಗಳು ಯಾವುವು; ಅದಕ್ಕಾಗಿ ಬಿಡುಗಡೆ ಮಾಡಲಾಗಿರುವ ಅನುದಾನವೆಷ್ಟು (ಕಾಮಗಾರಿಗಳ ಪ್ರಸ್ತುತ ಹಂತದ ವಿವರಗಳನ್ನು ನೀಡುವುದು)

ಇ) ಸರ್ಕಾರವು ಅಪೇಡಾದಿಂದ ಮಂಜೂರಾದ ಅನುದಾನವನ್ನು ನಿಗದಿತ ಅವಧಿಯಲ್ಲಿ ಖರ್ಚು ಮಾಡದಿರುವುದರಿಂದ, ಅಪೇಡಾದಿಂದ ಹೊಸ ಪ್ರಸ್ತಾವನೆಗಳು ಮಂಜೂರಾದಗದೇ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; ಅನುಮೋದನೆಗೆ ಬಾಕಿ ಇರುವ ಪ್ರಸ್ತಾವನೆಗಳು ಯಾವುವು? (ವಿವರ ನೀಡುವುದು)

----

**15/4/256**

## ವಿದ್ಯಾರ್ಥಿ ನಿಲಯಗಳ ಕೊರತೆ

**892 ಡಿ. ವೇದವ್ಯಾಸ ಕಾಮತ್ (ಮಂಗಳೂರು ನಗರ ದಕ್ಷಿಣ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ನಗರ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಸಲಾಗುತ್ತಿರುವ ವಿದ್ಯಾರ್ಥಿಗಳ ವಸತಿ ನಿಲಯಗಳಲ್ಲಿ ಪ್ರವೇಶಾವಕಾಶದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಜಿಲ್ಲಾವಾರು ವಿದ್ಯಾರ್ಥಿಗಳ ವಸತಿ ನಿಲಯಗಳ ಪ್ರವೇಶಕ್ಕೆ ಮಂಜೂರಾತಿ ಹಾಗೂ ದಾಖಲಾತಿಗಳ ಮಾಹಿತಿ ನೀಡುವುದು);

ಆ) ಹಾಗಿದ್ದಲ್ಲಿ, ಕೊರತೆ ಇರುವ ವಿದ್ಯಾರ್ಥಿ ನಿಲಯಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರದ ಹಂತದಲ್ಲಿ ಕ್ರಮವಹಿಸಲಾಗಿದೆಯೇ (ಸಂಪೂರ್ಣ ವಿವರ ನೀಡುವುದು)?

----

**15/4/257**

## 6ನೇ ವೇತನ ಪರಿಷ್ಕರಣೆ

**893 ಡಿ. ವೇದವ್ಯಾಸ ಕಾಮತ್ (ಮಂಗಳೂರು ನಗರ ದಕ್ಷಿಣ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಮೀನುಗಾರಿಕಾ ಅಭಿವೃದ್ಧಿ ನಿಗಮದ ನೌಕರರಿಗೆ ದಿನಾಂಕ:01.04.2012 ರಿಂದ ಜಾರಿಯಾಗಬೇಕಾಗಿದ್ದ 6ನೇ ಪರಿಷ್ಕೃತ ವೇತನವನ್ನು ದಿನಾಂಕ:01.04.2014ರಿಂದ ಜಾರಿಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ದಿನಾಂಕ:01.04.2012 ರಿಂದ ಪರಿಷ್ಕೃತ ವೇತನವನ್ನು ಜಾರಿಗೊಳಿಸದಿರಲು ಕಾರಣವೇನು;

ಇ) ಇದರಿಂದಾಗಿ ನಿವೃತ್ತಿ ಹೊಂದಿದ 107 ನೌಕರರಿಗೆ ವೇತನ ಪರಿಷ್ಕರಣೆಯ ಸೌಲಭ್ಯ ನೀಡದಿರಲು ಕಾರಣವೇನು;

ಈ) ಈ ನಿಗಮವು ಲಾಭದಾಯಕವಾಗಿ ನಡೆಯುತ್ತಿದ್ದರೂ 107 ನೌಕರರಿಗೆ ಗ್ರ್ಯಾಚ್ಯುಯಿಟಿ ಮತ್ತು ಗಳಿಕೆ ರಜೆ ನಗದೀಕರಣದ ವ್ಯತ್ಯಾಸದ ಮೊತ್ತವನ್ನು ಪಾವತಿಸದಿರಲು ಕಾರಣವೇನು?

----

**15/4/258**

## ಗಂಗಾ ಕಲ್ಯಾಣ ಯೋಜನೆ

**894 ಡಿ. ವೇದವ್ಯಾಸ ಕಾಮತ್ (ಮಂಗಳೂರು ನಗರ ದಕ್ಷಿಣ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಗರ ಪ್ರದೇಶದ ಕಿರುಸಾಲ ಮತ್ತು ಗಂಗಾ ಕಲ್ಯಾಣ ಯೋಜನೆಯಡಿ ಯಾವುದೇ ಅರ್ಜಿಗಳು ಸ್ವೀಕೃತವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಯಡಿ ನಿಗದಿಪಡಿಸಿದ ಗುರಿಯನ್ನು ಇದೇ ನಿಗಮದಡಿಯ ಯಾವುದಾದರೊಂದು ಯೋಜನೆಯ ಬೇರೆ ಫಲಾನುಭವಿಗಳು ಬಳಸಿಕೊಳ್ಳಲು ಸರ್ಕಾರ ಕ್ರಮ ಕೈಗೊಂಡಿದೆಯೇ (ಸಂಪೂರ್ಣ ಮಾಹಿತಿ ನೀಡುವುದು);

ಇ) 201819ನೇ ಸಾಲಿನಲ್ಲಿ ರಾಜ್ಯದ ಈ ಯೋಜನೆಗೆ ಸ್ವೀಕೃತವಾದ ಅರ್ಜಿಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು)?

----

**15/4/1303**

**ಭವನಗಳು**

**895** **ಟಿ. ವೆಂಕಟರಮಣಯ್ಯ (ಅಪ್ಪ ಕರನಹಳ್ಳಿ ಟಿ.ವೆಂಕಟೇಶ್) (ದೊಡ್ಡಬಳ್ಳಾಪುರ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ದೊಡ್ಡಬಳ್ಳಾಪುರ ತಾಲ್ಲೂಕಿನ ನಗರಸಭೆ ವ್ಯಾಪ್ತಿಯಲ್ಲಿರುವ ಜಗಜೀವನರಾಂ ಮತ್ತು ಅಂಬೇಡ್ಕರ್ ಭವನಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿರುವುದರಿಂದ ಸಾರ್ವಜನಿಕರಿಗೆ ಸೇವೆಗಳನ್ನು ಒದಗಿಸುವಲ್ಲಿ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

----

**15/4/1117**

**ಲಿಂಬೆ ಅಭಿವೃದ್ಧಿ ಮಂಡಳಿ**

**896** **ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ (ಇಂಡಿ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿಯನ್ನು ಇಂಡಿ ಪಟ್ಟಣದಲ್ಲಿ ಪ್ರಾರಂಭಿಸಲು ಮಂಜೂರಾತಿ ನೀಡಿದ್ದು ಯಾವಾಗ; ಮಂಡಳಿಯು ಕಾರ್ಯನಿರತವಾಗಿದೆಯೇ; ಈ ಮಂಡಳಿಯ ಧ್ಯೇಯೋದ್ದೇಶಗಳೇನು;

ಆ) ಮಂಡಳಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಮಂಡಳಿಗೆ ಮಂಜೂರು ಮಾಡಿರುವ ಅನುದಾನವೆಷ್ಟು; ಸದರಿ ಅನುದಾನವನ್ನು ಇದುವರೆಗೂ ಸದ್ಬಳಕೆ ಮಾಡದಿರಲು ಕಾರಣಗಳೇನು;(ವರ್ಷವಾರು ವಿವರ ಒದಗಿಸುವುದು);

ಇ) ಸದರಿ ಅನುದಾನದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು; ಈ ಅನುದಾನದಲ್ಲಿ ಲಿಂಬೆ ಬೆಳೆಗಾರರಿಗೆ ಯಾವ ರೀತಿ ಸಹಾಯ ಕಲ್ಪಿಸಲಾಗಿದೆ;

ಈ) ಮಂಡಳಿಗೆ ಇಲಾಖಾ ವತಿಯಿಂದ ನಿಯೋಜನೆಯ ಮೇಲೆ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಲು ಆರ್ಥಿಕ ಇಲಾಖೆಯು ಅನುಮೋದನೆ ನೀಡಿರುವುದು ನಿಜವೇ; ಯಾವಾಗ ಅನುಮೋದನೆ ನೀಡಲಾಗಿದೆ;

ಉ) ಹಾಗಿದ್ದಲ್ಲಿ, ಮಂಡಳಿಗೆ ಇದುವರೆಗೂ ಸಿಬ್ಬಂದಿ ವರ್ಗದವರನ್ನು ನೇಮಕ/ನಿಯೋಜನೆ ಮಾಡದಿರಲು ಕಾರಣಗಳೇನು; ( ವಿವರ ನೀಡುವುದು) ಊ) ದಿನಾಂಕ: 23.01.2019 ರಂದು ನಡೆದ ಲಿಂಬೆ ಅಭಿವೃದ್ಧಿ ಮಂಡಳಿಯ ಪ್ರಥಮಸಾಮಾನ್ಯ ಸಭೆಯಲ್ಲಿ ಮಂಡಳಿಯು ಕೈಗೊಂಡ ನಿರ್ಣಯಗಳೇನು; (ವಿವರ ಒದಗಿಸುವುದು)

ಋ) ಸದರಿ ನಿರ್ಧಾರ/ನಿರ್ಣಯಗಳನ್ನು ಇದುವರೆಗೂ ಅನುಷ್ಠಾನಗೊಳಿಸದಿರಲು ಕಾರಣಗಳೇನು; (ವಿವರ ಒದಗಿಸುವುದು)

ಎ) ಸದರಿ ಮಂಡಳಿಯ ಸಾಮಾನ್ಯ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಯಾವ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

----

15/4/1118

**ಬಂಜಾರ ಭವನ ನಿರ್ಮಾಣ**

**897 ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ (ಇಂಡಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಇಂಡಿ ಪಟ್ಟಣದಲ್ಲಿ ತಾಲ್ಲೂಕು ಬಂಜಾರ ಭವನ ನಿರ್ಮಾಣ ಮಾಡಲು ಮಂಜೂರಾತಿ ನೀಡಿರುವುದು ನಿಜವೇ; ಯಾವಾಗ ಮಂಜೂರಾತಿ ನೀಡಿದೆ; (ಆದೇಶದ ಪ್ರತಿ ನೀಡುವುದು)

ಆ) ಸದರಿ ಕಟ್ಟಡದ ಕಾಮಗಾರಿಯನ್ನು ಇದುವರೆಗೂ ಪ್ರಾರಂಭಿಸದೇ ಇರಲು ಕಾರಣವೇನು;

ಇ) ಸದರಿ ಕಾಮಗಾರಿಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ;

ಈ) ಇದುವರೆಗೂ ಟೆಂಡರ್ ಕರೆಯದಿರಲು ಕಾರಣಗಳೇನು; ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿದೆ; ಈ ಯೋಜನೆಯ ರೂಪುರೇಷಗಳೇನು; (ವಿವರ ನೀಡುವುದು)

ಉ) ಮಂಜೂರು ಮಾಡಿದ ಅನುದಾನವೆಷ್ಟು;ಕಾಮಗಾರಿಯನ್ನು ನಿರ್ಧಿಷ್ಟವಾದ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

----

15/4/1119

**ಕೃಷಿ ತಂತ್ರಜ್ಞಾನ ಅಳವಡಿಕೆ**

**898 ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ (ಇಂಡಿ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಇಂಡಿ ತಾಲ್ಲೂಕು ಹೆಚ್ಚಾಗಿ ಲಿಂಬೆ, ದಾಳಿಂಬೆ, ಸಪೋಟ ಮೊದಲಾದ ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದರಲ್ಲಿ ಮಂಚೂಣಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಇಂಡಿ ತಾಲ್ಲೂಕು ಸತತವಾಗಿ ಭೀಕರ ಬರಗಾಲಕ್ಕೆ ತುತ್ತಾಗಿರುವುದರಿಂದ ಅಂತರ್ಜಲಮಟ್ಟ ಕುಸಿದು ನೀರಿನ ಕೊರತೆಯಿಂದಾಗಿ ರೈತರು ತೀವ್ರ ಕಷ್ಟಕರ ಪರಿಸ್ಥಿತಿಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಭಾಗದ ರೈತರುಗಳಿಗೆ ಅನುಕೂಲವಾಗುವಂತೆ ಇಂಡಿ ಪಟ್ಟಣದಲ್ಲಿ ಇಸ್ರೇಲ್ ಮಾದರಿಯ ಕೃಷಿ ತಂತ್ರಜ್ಞಾನವನ್ನು ಅಳವಡಿಸಲು ಸರ್ಕಾರವು ಆಸಕ್ತಿ ಹೊಂದಿದೆಯೇ;

ಈ) ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕ್ರಮಗಳೇನು; (ವಿವರ ನೀಡುವುದು)

----

15/4/1120

**ಹರಳಯ್ಯ ಭವನ**

**899 ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ (ಇಂಡಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ತಾಲ್ಲೂಕು ಕೇಂದ್ರವಾದ ಇಂಡಿ ಪಟ್ಟಣದಲ್ಲಿ ಶ್ರೀ ಸಮಗಾರ ಹರಳಯ್ಯ ಸಮುದಾಯ ಭವನ ನಿರ್ಮಾಣ ಮಾಡುವ ಪ್ರಸ್ತಾವನೆಯು ಸಮಾಜ ಕಲ್ಯಾಣ ಇಲಾಖೆಗೆ ಬಂದಿರುವುದು ನಿಜವೇ; ಹಾಗಿದ್ದಲ್ಲಿ, ಇದುವರೆಗೂ ಅನುದಾನ ಮಂಜೂರು ಮಾಡದಿರಲು ಕಾರಣವೇನು;

ಆ) ಸದರಿ ಕಾಮಗಾರಿಗೆ ಅನುದಾನ ಮಂಜೂರು ಮಾಡಲಾಗುವುದೇ;ಎಷ್ಟು ಅನುದಾನವನ್ನು ಯಾವ ಕಾಲಮಿತಿಯೊಳಗೆ ಮಂಜೂರು ಮಾಡಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)

----

**ಬೆಂಗಳೂರು - 560001.** **ಎಂ.ಕೆ. ವಿಶಾಲಾಕ್ಷಿ,**

**ಶುಕ್ರವಾರ, 19ನೇ ಜುಲೈ, 2019.** **ಕಾರ್ಯದರ್ಶಿ (ಪ್ರ)**